ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2025 ಮಾಸ ಪತ್ರಿಕೆ

ಸಂಪುಟ/Volume : 48
ಸಂಚಿಕೆ/Issue : 1
ಪುಟ/Pages : 12
ಬೆಲೆ/Price : ₹ 15/-

Akhila Karnataka Shikshaka Samachar | October 2025 | Monthly

## ಪ್ರತಿಭಾ ಪುರಸ್ಕಾರ

ಕಲಬುರ್ಗಿ ಜಿಲ್ಲೆ



## ಶಿಕ್ಷಕರ ದಿನಾಚರಣೆ

ಬೀದರ್ ಜಿಲ್ಲೆ



#RSS100



## ಸಂಘ ಶತಾಬ್ದಿ

100 ವರ್ಷಗಳನ್ನು ಪೂರೈಸಿದ, ಕೋಟ್ಯಂತರ ಸ್ವಯಂಸೇವಕರನ್ನು ಹೊಂದಿರುವ ರಾಷ್ಟ್ರದ ಹಾಗೂ ವಿಶ್ವದ ಏಕೈಕ ಮಹಾನ್ ದೇಶಭಕ್ತರ ಸಂಘಟನೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಎಲ್ಲಾ ಸ್ವಯಂಸೇವಕರಿಗೆ ಸಂಘ ಶತಾಬ್ದಿಯ ಶುಭಾಶಯಗಳು

ಸರ್ವರಿಗೂ

## ದೀಪಾವಳಿ ಹಬ್ಬದ

ಹಾರ್ದಿಕ ಶುಭಾಶಯಗಳು

# ಸಂಪಾದಕೀಯ

ಆತ್ಮೀಯರೇ,

ಸಮಸ್ತ ಆತ್ಮೀಯ ಓದುಗರಿಗೆ ವಿಜಯದ ಸಂಕೇತವನ್ನು ಸೂಚಿಸುವ ಹಬ್ಬವಾದ ವಿಜಯದಶಮಿಯ ಹಾರ್ದಿಕ ಶುಭಾಷಯಗಳು. ಇದೇ ವಿಜಯದಶಮಿಯಂದು 1925ರಲ್ಲಿ ಜನ್ಮತಾಳಿ ಶತಮಾನದ ಸಂಭ್ರಮದಲ್ಲಿರುವ ಸಾಮಾಜಿಕ ಸಂಘಟನೆಯೇ "ರಾಷ್ಟ್ರೀಯ ಸ್ವಯಂಸೇವಕ ಸಂಘ" (ಆರ್.ಎಸ್.ಎಸ್). ಈ ಸಂಘಟನೆಯ ಸಂಸ್ಥಾಪಕರು ಡಾ॥ ಕೇಶವ ಬಲಿರಾಮ್ ಹೆಡಗೇವಾರರು. ಕೆಲವು ಚಿಂತಕರು ಸೇರಿ ಸಂಸ್ಥಾಪಿಸಿದ ಈ ಸಂಘಟನೆ ಇಂದು ಗ್ರಾಮ, ಗ್ರಾಮಗಳಲ್ಲಿ ಶಾಖೆಯನ್ನು ನಡೆಸುವುದರ ಮೂಲಕ ಮಕ್ಕಳು, ಯುವಕರು ಹಾಗೂ ಎಲ್ಲರಲ್ಲೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುವುದರ ಜೊತೆಗೆ ದೇಶೀಯ ಆಟಗಳ ಮೂಲಕ ರಾಷ್ಟ್ರಭಕ್ತಿಯನ್ನು ಸದೃಢಗೊಳಿಸುವ ಕಾರ್ಯವನ್ನು ಮಾಡುತ್ತಿದೆ. ತನಗೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ ಎಂಬ ಸೇವಾ ಭಾವನೆಯನ್ನು ಹೊಂದಿರುವ ಸ್ವಯಂ ಸೇವಕರಿಂದ ಸಂಘ ಇಂದು ದೇಶದಾದ್ಯಂತ ಹೆಮ್ಮರವಾಗಿ ಬೆಳೆದಿದೆ. ಅಲ್ಲದೆ ವಿಶ್ವದ 53 ದೇಶಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ. ಆರ್‌ಎಸ್‌ಎಸ್‌ನ ಪರಿವಾರ ಸಂಘಟನೆಗಳು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಾ ವ್ಯಕ್ತಿ ನಿರ್ಮಾಣದ ಕಾರ್ಯಗಳನ್ನು ಮಾಡುತ್ತಿವೆ. ಈಗಿನ ಸರಸಂಘ ಚಾಲಕರಾದ ಮಾನನೀಯ ಮೋಹನ್ ಜೀ ಭಾಗವತ್‌ರನ್ನು ಒಳಗೊಂಡಂತೆ ಸಂಘದ ಪ್ರಚಾರಕರು ಸರಳ ಜೀವನ, ಉದಾತ್ತ ಚಿಂತನೆ ಎಂಬ ಧ್ಯೇಯ ವಾಕ್ಯದೊಡನೆ ದೇಶದಾದ್ಯಂತ ಸಮರ್ಪಣಾ ಮನೋಭಾವದ ಮೂಲಕ ರಾಷ್ಟ್ರಸೇವೆಯಲ್ಲಿ ನಿರತರಾಗಿದ್ದಾರೆ ಹಾಗೂ ಸ್ವಯಂ ಸೇವಕರಿಗೆ ಪ್ರೇರಣಾದಾಯಕರಾಗಿದ್ದಾರೆ, ಇದು ಆರ್‌ಎಸ್‌ಎಸ್ ನೈಜ ಶಕ್ತಿ.

ಅಕ್ಟೋಬರ್-2ರಂದು ನಮ್ಮ ಭಾರತ ಕಂಡ ಶ್ರೇಷ್ಠ ಪುರುಷರಾದ ಮಹಾತ್ಮ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರೀಜಿಯವರ ಜನ್ಮದಿನವನ್ನು ನಾವೆಲ್ಲರೂ ಆಚರಿಸುತ್ತೇವೆ. ನಮ್ಮ ಭಾರತದ ಸ್ವತಂತ್ರವನ್ನು ಅಹಿಂಸೆಯ ಮೂಲಕ ಪಡೆಯಬೇಕೆಂಬ ಮಹದಾಸೆಯನ್ನು ಇಟ್ಟುಕೊಂಡು ಸತ್ಯಾಗ್ರಹಗಳ ಮೂಲಕ ಜನರನ್ನು ಒಗ್ಗೂಡಿಸಿ ಸ್ವಾತಂತ್ರವನ್ನು ತಂದುಕೊಟ್ಟ ಮಹನೀಯರಾಗಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರೀರವರು ಮಹಾತ್ಮ ಗಾಂಧಿಯವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ರಾಷ್ಟ್ರವನ್ನು ಪ್ರಗತಿಯತ್ತ ಮುನ್ನಡೆಸುವ ದೂರದೃಷ್ಟಿಯುಳ್ಳ ನಾಯಕರಾಗಿ, ಭಾರತದ ಎರಡನೇ ಪ್ರಧಾನಮಂತ್ರಿಯಾಗಿ ಅಪರಿಮಿತ ಸೇವೆಯನ್ನು ಸಲ್ಲಿಸಿದ್ದಾರೆ. ಈ ಇಬ್ಬರು ನಾಯಕರಿಗೆ ಗೌರವ ಸಲ್ಲಿಸಬೇಕಾದುದು ಭಾರತೀಯರಾದ ನಮ್ಮ ಕರ್ತವ್ಯವಾಗಿದೆ.

ವಾಲ್ಮೀಕಿ ಮಹರ್ಷಿಗಳು ಓರ್ವ ಸಂಸ್ಕೃತ ಕವಿ. ರಾಮಾಯಣ ಮಹಾಕಾವ್ಯದ ಕರ್ತೃಗಳಾಗಿದ್ದಾರೆ. ಇವರ ಕೃತಿ ವಾಲ್ಮೀಕಿ ರಾಮಾಯಣವೆಂದೇ ಜನಮಾನಸದಲ್ಲಿ ಪ್ರಸಿದ್ಧವಾಗಿದೆ. ಪ್ರತಿ ವರ್ಷ ಆಶ್ವೀಜ ಮಾಸದ ಪೌರ್ಣಿಮೆಯಂದು ವಾಲ್ಮೀಕಿ ಮಹರ್ಷಿಗಳ ಜಯಂತಿಯನ್ನು ಶಾಲಾ ಕಾಲೇಜುಗಳಲ್ಲಿ, ಸರ್ಕಾರಿ ಕಾರ್ಯಕ್ರಮವಾಗಿ ಹಾಗೂ ಸಾರ್ವಜನಿಕವಾಗಿ ಆಚರಣೆ ಮಾಡುತ್ತಾರೆ.

ಸರ್ದಾರ್ ವಲ್ಲಭಭಾಯಿ ಪಟೇಲ ಜನ್ಮದಿನ ಅಕ್ಟೋಬರ್ 31. ಈ ದಿನವನ್ನು ಏಕತಾ ದಿನವೆಂದು ರಾಷ್ಟ್ರದಾದ್ಯಂತ ಆಚರಣೆ ಮಾಡುತ್ತಾರೆ. ಹಲವಾರು ರಾಜ ಪ್ರಭುತ್ವದ ರಾಜ್ಯಗಳನ್ನು ಭಾರತದ ಒಕ್ಕೂಟಕ್ಕೆ ಸೇರಲು ಪ್ರೋತ್ಸಾಹಿಸಿದ ಹಾಗೂ ಮನವೊಲಿಸಿದ ನಾಯಕರಿವರು. ಹಲವಾರು ದಿಟ್ಟ ನಿರ್ಧಾರಗಳನ್ನು ದೇಶದ ಪ್ರಗತಿಗಾಗಿ ಕೈಗೊಂಡಿದ್ದಕ್ಕಾಗಿ ಇವರನ್ನು "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯುತ್ತಾರೆ.

ದೀಪಾವಳಿಯು ಹಿಂದುಗಳ ಪವಿತ್ರ ಹಬ್ಬಗಳಲ್ಲೊಂದಾಗಿದ್ದು, ಇದು ದೀಪಗಳ ಹಬ್ಬವಾಗಿದ್ದು, ಕತ್ತಲೆಯನ್ನು ನಿವಾರಿಸಿ ಬೆಳಕನ್ನು ಹರಡುತ್ತದೆ. ಈ ಧಾರ್ಮಿಕ ಹಬ್ಬವನ್ನು ಐದು ದಿನಗಳ ಕಾಲ ವಿಶೇಷವಾಗಿ ಉತ್ತರ ಕರ್ನಾಟಕ ಮತ್ತು ಉತ್ತರ ಭಾರತದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಡೀ ದೇಶದಲ್ಲಿ ಪಟಾಕಿಗಳನ್ನು ಹಾರಿಸುವುದರ ಮೂಲಕ ಜನರು ಸಂಭ್ರಮಿಸುತ್ತಾರೆ. ಪಟಾಕಿಗಳನ್ನು ಹಾರಿಸುವುದರ ಮುನ್ನ ಎಚ್ಚರಿಕೆಯನ್ನು ವಹಿಸುವುದು ಕೂಡ ಮುಖ್ಯವಲ್ಲವೆ?

ಎಲ್ಲರಿಗೂ ದೀಪಗಳ ಹಬ್ಬವಾದ ದೀಪಾವಳಿಯ ಹಾರ್ದಿಕ ಶುಭಕಾಮನೆಗಳು.

ಸಂಪಾದಕ

## ಸಂಪಾದಕ ಮಂಡಳಿ


ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ವೈಜ್ಞಾನಿಕತೆಯ ಆಧಾರದಲ್ಲಿ ಇತಿಹಾಸದ ಮರು ನಿರೂಪಣೆ – ವಿ. ನಾಗರಾಜ್ ... 3
- ಶಿಕ್ಷಣ: ಆರ್.ಎಸ್.ಎಸ್.ನ ದೃಷ್ಟಿಕೋನದಲ್ಲಿ – ಡಾ॥ ಲೋಕೇಶ್ ... 5
- ಶಿಕ್ಷಕರ ದಿನಾಚರಣೆ ಕಾರ್ಯಕ್ರಮ – ಬೀದರ್ ಜಿಲ್ಲೆ ... 6
- ಶಿಕ್ಷಣ, ಸಮಯ ಶ್ರೇಷ್ಠ ಸಂಪತ್ತು– ಕಲಬುರ್ಗಿ ಜಿಲ್ಲೆಯಲ್ಲಿ ಪ್ರತಿಭಾ ಪುರಸ್ಕಾರ ... 7
- ರಾಜ್ಯದ ವಿವಿಧೆಡೆಗಳಲ್ಲಿ ನಮ್ಮ ವಿದ್ಯಾಲಯ – ನಮ್ಮ ಸ್ವಾಭಿಮಾನ ಅಭಿಯಾನ ... 8
- ಶ್ರದ್ಧಾಂಜಲಿ ... 11
- ಸಹಲ್ ಕಾರ್ಯಕ್ರಮ–ಬೆಂಗಳೂರು ಉತ್ತರ ಜಿಲ್ಲೆ ... 12

# ವೈಜ್ಞಾನಿಕತೆಯ ಆಧಾರದಲ್ಲಿ ಇತಿಹಾಸದ ಮರು ನಿರೂಪಣೆ



**ವಿ. ನಾಗರಾಜ್**
**ಅಧ್ಯಕ್ಷರು, ದಿ ಮಿಥಿಕ್ ಸೊಸೈಟಿ ಹಾಗೂ ಕ್ಷೇತ್ರಿಯ ಕಾರ್ಯವಾಹ, ಸದಸ್ಯ, ರಾ.ಸ್ವ.ಸಂ.**

ರಾಷ್ಟ್ರೀಯಸ್ವಯಂಸೇವಕ ಸಂಘ ಪ್ರಾರಂಭವಾದ ಸಮಯ ಒಂದು ವಿಶಿಷ್ಟವಾದ ಕಾಲಘಟ್ಟ. ಪಾಶ್ಚಾತ್ಯರ ಪ್ರಾಬಲ್ಯ ಜಗತ್ತಿನ ಎಲ್ಲಾ ಕ್ಷೇತ್ರಗಳಲ್ಲಿ ಸರ್ವೋನ್ನತಿಯಲ್ಲಿ ಇದ್ದ ಕಾಲ. ವೈಚಾರಿಕ ಕ್ಷೇತ್ರದಲ್ಲಿ ಪಾಶ್ಚಾತ್ಯ ಚಿಂತನೆಗಳದ್ದೇ ಪಾರಮ್ಯ.

ಇತ್ತ ಭಾರತದಲ್ಲಿ, ಹಿಂದೂ ಸಂಸ್ಕೃತಿ, ಪರಂಪರೆಯ ಆರಾಧಕರಾಗಿದ್ದ ದಯಾನಂದ ಸರಸ್ವತಿ, ಬಂಕಿಮ ಚಂದ್ರರು, ಬಾಲಗಂಗಾಧರತಿಲಕರು ಇತಿಹಾಸದ ಕಾಲಗರ್ಭ ಸೇರಿದ್ದರು. ಯೋಗಿ ಅರವಿಂದರು ಆಧ್ಯಾತ್ಮಿಕ ಸಾಧನೆಯಲ್ಲಿ ಮುಳುಗಿದ್ದರು. ಸುಪ್ರಸಿದ್ಧ ವೈಚಾರಿಕ ಚಿಂತಕರಾದ ರಾಮಸ್ವರೂಪರು ಗುರುತಿಸಿದಂತೆ ಭಗವದ್ಗೀತೆ ಹಿಡಿದು ಹೋರಾಟ ಮಾಡುತ್ತಿದ್ದ ಕ್ರಾಂತಿಕಾರಿಗಳ ಕಾಲ ಮುಗಿದು, ಕಮ್ಯುನಿಸ್ಟ್ ಸಿದ್ಧಾಂತದಿಂದ ಸ್ಫೂರ್ತಿಗೊಂಡ ಕ್ರಾಂತಿಕಾರಿಗಳ ಆಂದೋಲನ ಪ್ರಾರಂಭವಾಗಿತ್ತು. ಮಹಾತ್ಮಗಾಂಧೀಜಿ ಅವರ ಚಿಂತನೆಗಳು ದೇಶಾದ್ಯಂತ ಮುನ್ನಲೆಯಲ್ಲಿದ್ದವು. ಇಂತಹ ಸಂಕೀರ್ಣ ಕಾಲದಲ್ಲಿ ಡಾಕ್ಟರ್‌ಜಿ ಅವರು ಸಂಘವನ್ನು ಪ್ರಾರಂಭಿಸಿದರು. ಹೊರನೋಟಕ್ಕೆ ಶಾರೀರಿಕ ಚಟುವಟಿಕೆಗಳಿಂದ ಕೂಡಿದ ಬಾಲ ಯುವಕರ ಸಂಘಟನೆ ಎಂದೆನಿಸಿದರೂ, ಸಂಘದ ಉದ್ದೇಶ ಮತ್ತು ಶಿಕ್ಷಣಗಳ ಬಗ್ಗೆ ಡಾಕ್ಟರ್‌ಜಿಯವರಿಗೆ ಸ್ಪಷ್ಟ ಅರಿವಿತ್ತು. ಹಿಂದೂ ಸಮಾಜದ ಮಾನಸಿಕತೆಯನ್ನು ಬದಲಾಯಿಸಬೇಕಾದ, ಗಟ್ಟಿಗೊಳಿಸಬೇಕಾದ ಅನಿವಾರ್ಯತೆಯನ್ನು ಅವರು ಮನಗಂಡಿದ್ದರು. ಹಿಂದೂ ಧರ್ಮ ಮತ್ತು ಸಂಸ್ಕೃತಿಗಳ ಆಧಾರದ ಮೇಲೆಯೇ ರಾಷ್ಟ್ರದ ಎಲ್ಲಾ ರಂಗಗಳಲ್ಲಿ ಪುನರುತ್ಥಾನಕ್ಕೆ ಬೇಕಾದ ಸಂಘ ತತ್ವಶಾಸ್ತ್ರದ (ಫಿಲಾಸಫಿ) ಭದ್ರ ಬುನಾದಿಯನ್ನು ಯೋಜಿಸಿದರು. ಅವರ ನಂತರ ಬಂದ ಸರಸಂಘಚಾಲಕರು, ಸಂಘದ ವರಿಷ್ಠರು ಕಾಲಕ್ಕೆ ಸುಸಂಗತವಾದ ವೈಚಾರಿಕ ಚಿಂತನೆಗಳನ್ನು ಅಳವಡಿಸಿದರು. ಇದರಿಂದಾಗಿ ಶತಮಾನದ ಸುದೀರ್ಘ ಪಯಣವನ್ನು ಮಾಡಿರುವ ಸಂಘ, ರಾಷ್ಟ್ರಕ್ಕೆ, ಹಿಂದೂ ಸಮಾಜಕ್ಕೆ ಎದುರಾದ ವೈಚಾರಿಕ ಸವಾಲುಗಳನ್ನು, ಅಸಂಗತಗಳನ್ನು ನಿವಾರಿಸುವುದರಲ್ಲಿ ಯಶಸ್ವಿಯಾಯಿತು.

ಹಿಂದೂ ಸಮಾಜದ ಅಸಂಘಟಿತ ಸ್ಥಿತಿಯೊಂದಿಗೆ ಅದರ ಮಾನಸಿಕತೆ ಸಂಪೂರ್ಣವಾಗಿ ಕುಸಿದಿತ್ತು, ವಿಕಲ್ಪಗೊಂಡಿತ್ತು. ಇದಕ್ಕೆ ಕಾರಣ ತಮ್ಮ ಸಾಮ್ರಾಜ್ಯವನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಲು ಬ್ರಿಟಿಷರು ಪ್ರಚುರ ಪಡಿಸಿದ್ದ ಧೂರ್ತ, ಕಪಟ, ಮಿಥ್ಯೆಗಳು.

ಇಂತಹ ಮೊದಲ ಮಿಥ್ಯೆ ಎಂದರೆ "ಭಾರತ ಒಂದು ದೇಶವೂ ಅಲ್ಲ, ರಾಷ್ಟ್ರವೂ ಅಲ್ಲ. ಅನೇಕ ರಾಷ್ಟ್ರಗಳು, ಸಂಸ್ಕೃತಿಗಳು, ಬುಡಕಟ್ಟುಗಳು ಸೇರಿರುವ ಒಂದು ಉಪಖಂಡ. ಮೊಘಲರು, ಬ್ರಿಟಿಷರ ಆಳ್ವಿಕೆಯಿಂದಾಗಿ ಒಂದು ದೇಶ, ರಾಷ್ಟ್ರವಾಗಿದೆ" ಎನ್ನುವುದು. ನಮ್ಮವರೇ ಆದ ಅನೇಕ ವಿದ್ವಾಂಸರು, ನಾಯಕರು ಈ ಮಿಥ್ಯೆಯನ್ನು ನಂಬಿದ್ದರು.

ಪ್ರಾರಂಭದ ದಿನಗಳಿಂದಲೂ ಸಂಘವು ಬೌದ್ಧಿಕ್, ಬೈಠಕ್, ಚರ್ಚೆ ಮತ್ತು ಲೇಖನಗಳ ಮೂಲಕ, ನಿಖರವಾದ ಸಾಕ್ಷ್ಯಾಧಾರಗಳ ಸಮೇತ ಪ್ರಾಚೀನ ಕಾಲದಿಂದ ಭಾರತ ಒಂದು ದೇಶವಾಗಿ, ಒಂದು ರಾಷ್ಟ್ರವಾಗಿ, ಒಂದು ಸಂಸ್ಕೃತಿಯಿಂದ (ಹಿಂದೂ ಸಂಸ್ಕೃತಿ)ಯಿಂದ ಕೂಡಿದೆ ಎನ್ನುವುದನ್ನು ಸ್ವಯಂಸೇವಕರಿಗೆ, ಸಾರ್ವಜನಿಕರಿಗೆ ತಿಳಿಸುತ್ತಿದೆ.

**ಉತ್ತರಂಯತ್ಸಮುದ್ರಸ್ಯ ಹಿಮಾದ್ರೇಶ್ಚೈವದಕ್ಷಿಣಮ್ ।**
**ವರ್ಷಂತದ್ಭಾರತಂ ನಾಮ ಭಾರತೀಯತ್ರ ಸಂತತಿಃ ।**

ಹಾಗೂ

**ಗಂಗೇ ಚ ಯಮುನೇಚೈವಗೋದಾವರಿ ಸರಸ್ವತಿ ।**
**ನರ್ಮದೇ ಸಿಂಧೂಕಾವೇರಿ ಜಲೇಸ್ಮಿನ್ ಸನ್ನಿಧಿಂಕುರು ।**

ಈ ಶ್ಲೋಕಗಳು ಹಿಂದೂ ಧಾರ್ಮಿಕ ಆಚರಣೆಗಳಿಗೆ ಸೀಮಿತವಾಗಿದ್ದವು. ಸಂಘ ಇವುಗಳನ್ನು ನಮ್ಮ ರಾಷ್ಟ್ರಪ್ರಜ್ಞೆಯ ಜಾಗೃತಿಗೆ, ಒಗ್ಗಟ್ಟಿಗೆ ಬಳಸಿದ್ದಲ್ಲದೇ, ಇಡೀ ರಾಷ್ಟ್ರ ಒಂದು ಹಾಗೂ ಪ್ರಾಚೀನ ಎನ್ನುವುದನ್ನು ಪ್ರತಿಪಾದಿಸಲು ಉಪಯೋಗಿಸಿತು. ಇಂತಹ ಅನೇಕ ಶ್ಲೋಕಗಳು ನಮ್ಮ ಪ್ರಾಚೀನತೆಯನ್ನು, ಅಖಂಡತೆಯನ್ನು ತಿಳಿಸುತ್ತವೆ ಎನ್ನುವ ಐತಿಹಾಸಿಕ ಭೂಮಿಕೆಯನ್ನು ಮನದಟ್ಟು ಮಾಡಿಸಿತು. ಸಂಘದ ಶಾಖೆಗಳಲ್ಲಿ ಪ್ರತಿನಿತ್ಯ ಹೇಳುವ ಪ್ರಾತಃಸ್ಮರಣೆಯ ಏಕಾತ್ಮತಾ ಸ್ತೋತ್ರ ಇಡೀ ಭಾರತದ ನದಿ, ಪರ್ವತ, ಪುಣ್ಯನಗರಿಗಳಲ್ಲದೆ, ಮಹಾಪುರುಷರು, ಮಾತೆಯರ ಸ್ಮರಣೆಯನ್ನು ಮಾಡುತ್ತದೆ. ಇದರಿಂದ ಸ್ವಯಂಸೇವಕರಿಗೆ ದೇಶದ ಪರಂಪರೆಯ, ಅಖಂಡತೆಯ ಪರಿಚಯವಾಗುತ್ತದೆ.

ಸಂಘದ ಅಖಿಲ ಭಾರತೀಯ ಬೌದ್ಧಿಕ ಪ್ರಮುಖರಾಗಿದ್ದ ಶ್ರೀರಂಗ ಹರಿ ಅವರು, ಅನಾದಿ ಕಾಲದಿಂದ ಪ್ರಾಂತಗಳ ವೈವಿಧ್ಯತೆಯೊಂದಿಗೆ ಹೇಗೆ ರಾಮ, ಕೃಷ್ಣ, ಶಿವ ಇತ್ಯಾದಿ ಹೆಸರುಗಳು ಜನತೆಯ ಹೆಸರಾಗಿವೆ ಎನ್ನುವುದನ್ನು ವಿವರಿಸುತ್ತಿದ್ದರು. (ಉದಾ: ರಾಮಯ್ಯ, ರಾಮಪ್ಪ, ರಾಮಲಾಲ್, ರಾಮಪ್ರಸಾದ್, ಇತ್ಯಾದಿ). ಇದು ನಮ್ಮ ಸಾಂಸ್ಕೃತಿಕ ಏಕತೆಯ ದ್ಯೋತಕ ಎನ್ನುತ್ತಿದ್ದರು. ನಮ್ಮ ಮೂಢನಂಬಿಕೆಗಳು ಇಡೀ ರಾಷ್ಟ್ರದಲ್ಲಿ ಒಂದೇ ಎನ್ನುತ್ತಿದ್ದರು. (ಉದಾ: ವಾಹನಕ್ಕೆ ಬೆಕ್ಕು ಅಡ್ಡ ಬಂದರೆ, ಕನ್ಯಾಕುಮಾರಿಯಿಂದ ಲಡಾಖ್‌ವರೆಗೆ ಒಂದೇ ರೀತಿ ಭಾವಿಸುವ ಪರಿ–ಅಪಶಕುನ)!

ಸಂಘ ಪ್ರೇರಣೆಯಿಂದ ಪ್ರಾರಂಭವಾದ ಕರ್ನಾಟಕದ ರಾಷ್ಟ್ರೋತ್ಥಾನ ಪರಿಷತ್ತು ಮಕ್ಕಳಿಗಾಗಿ ಐನೂರಹತ್ತು ಮಹಾಪುರುಷರ ಮತ್ತು ಮಹಿಳೆಯರ ಕಿರುಹೊತ್ತಿಗೆಗಳನ್ನು ಪ್ರಕಟಿಸಿದೆ. ಭಾರತದ ಎಲ್ಲಾ ಪ್ರಮುಖ ಭಾಷೆಗಳಲ್ಲಿ, ಆಂಗ್ಲ ಭಾಷೆಯಲ್ಲಿ ಇವು ಲಭ್ಯ. ಈ ಕಿರು ಹೊತ್ತಿಗೆಗಳು ರಾಷ್ಟ್ರದ ಮತ್ತು ಸಂಸ್ಕೃತಿಯ ಅಖಂಡತೆಗೆ ಸಾಧಕ. ಇಂದು ಇವು ಒಂದು ಕೋಟಿಗೂ ಅಧಿಕವಾಗಿ ಮುದ್ರಿತವಾಗಿವೆ. ಹಾಗೆ ಭಾರತದ ಪ್ರಾಚೀನತೆ, ಪಾವಿತ್ರ್ಯತೆ ಮತ್ತು ಅಖಂಡತೆಯನ್ನು ತಿಳಿಸುವ ಪುಸ್ತಕ 'ಭಾರತದರ್ಶನ' ದಿ.ವಿದ್ಯಾನಂದರ ಉಪನ್ಯಾಸಗಳ ಸಂಗ್ರಹ.

ಬ್ರಿಟಿಷರು ಪ್ರಚುರ ಪಡಿಸಿ, ಸಾಮಾನ್ಯರಿಂದ ಹಿಡಿದು ವಿದ್ವಾಂಸರವರೆಗೆ ಭ್ರಮೆಯನ್ನು ಮೂಡಿಸಿದ್ದು ಆರ್ಯ ಆಕ್ರಮಣವಾದ (ಆರ್ಯನ್ ಇನ್ವೇಶನ್ ಥಿಯರಿ). ಹಿಂದೂಧರ್ಮ, ಸಂಸ್ಕೃತಿಗಳ ಬುನಾದಿಯನ್ನು ಅಲುಗಾಡಿಸಿ, ಹಿಂದೂರಾಷ್ಟ್ರ ಅನ್ನುವುದೇ ಸುಳ್ಳು ಎಂದು ಬಿಂಬಿಸಿದ್ದ ವಾದ ಇದು. ಹಿಂದೂಗಳು ಇಲ್ಲಿನ ಮೂಲ ನಿವಾಸಿಗಳಲ್ಲ ಎಂದು ನಂಬಿಸಿದ್ದೂ ಇದೇ ವಾದ. ಆರ್ಯದ್ರಾವಿಡ– ವಿವಾದ ಹುಟ್ಟಲು ಇದೇ ಕಾರಣ.

**ಪುಟ 4 ಕ್ಕೆ ➤**

➢ ಪುಟ 3 ರಿಂದ.....

ಸ್ವಯಂಸೇವಕರಾದ ವಿದ್ವಾಂಸರಾದ ಡಾಕ್ಟರ್ ವಾಕಣಕರ್, ಡಾ.ಎನ್.ಎಸ್. ರಾಜಾರಾಮ್, ಡಾ.ಬಿ.ಲಾಲ್,ಡಾ.ಕೆ.ಎನ್ ದೀಕ್ಷಿತ್ ಮೊದಲಾದವರು ವೈಜ್ಞಾನಿಕ ಸಾಕ್ಷ್ಯಗಳ ಆಧಾರದ ಮೇಲೆ, ತರ್ಕಬದ್ಧವಾಗಿ 'ಆಕ್ರಮಣವಾದ', 'ಆರ್ಯರ ವಲಸೆ' (ಆರ್ಯನ್ ಮೈಗ್ರೇಶನ್ ಥಿಯರಿ) ವಾದಗಳನ್ನು ತಳ್ಳಿಹಾಕಿದರು. ಹಿಂದು ಜನಾಂಗವೇ ಭಾರತದ ಮೂಲ ನಿವಾಸಿಗಳು ಎನ್ನುವ ಸತ್ಯವನ್ನು ಸಿದ್ಧಪಡಿಸಿದರು. ಇದರ ಪರಿಣಾಮವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪುರಾತತ್ವ ಶಾಸ್ತ್ರಜ್ಞರು, ಇತಿಹಾಸಕಾರರು ಸಂಶೋಧನೆಗಳನ್ನು ಕೈಗೊಂಡು 'ಆರ್ಯ ಆಕ್ರಮಣ' ಮತ್ತು 'ಆರ್ಯ ವಲಸೆ' ಎರಡೂ ಕಪೋಲಕಲ್ಪಿತವಾದವು ಎಂದು ಸಾರಿದ್ದಾರೆ. ಇತ್ತೀಚೆಗೆ ರಾಖಿಗಡಿ (ಹರಿಯಾಣ)ಯಲ್ಲಿ ಉತ್ಖನನದಲ್ಲಿ ಸಿಕ್ಕ ಮಾನವ ಅಸ್ಥಿಪಂಜರಗಳ 'ವಂಶವಾಹಿನಿ'(ಡಿಎನ್ಎ) ವಿಶ್ಲೇಷಣೆ ಭಾರತೀಯ ಮೂಲ ನಿವಾಸಿಗಳು ಹಿಂದೂಗಳೇ ಎಂದು ಸಿದ್ಧಪಡಿಸುತ್ತದೆ. ಇದನ್ನು ಸಂಶೋಧಿಸಿದವರು ಡಾಕ್ಟರ್ ವಸಂತ ಶಿಂಧೆ ಅವರು. ಈ ಮಾಹಿತಿಯ ಆಧಾರದ ಮೇಲೆ ಆರ್ಎಸ್ಎಸ್ ಸರಸಂಘ ಚಾಲಕ ಶ್ರೀ ಮೋಹನ್ ಭಾಗವತರು, ಭಾರತೀಯರೆಲ್ಲರೂ ಒಂದೇ ಮೂಲದವರು ಎಂದು ಹೇಳಿದ್ದು.

ಪಾಶ್ಚಾತ್ಯ ವಿದ್ವಾಂಸರು, ಎಡಪಂಥೀಯ ಚಿಂತಕರು ಸಾರಿದ್ದ ಇನ್ನೊಂದು ವಿಚಾರ, 'ಸರಸ್ವತಿ ನದಿ ಇರಲೇ ಇಲ್ಲ. ಅದೊಂದು ಮಿಥ್ಯೆ' ಎಂಬುದು. ಇದು ನಮ್ಮ ನೈಜ ಇತಿಹಾಸದ ಬುನಾದಿಯನ್ನು ಅಲುಗಾಡಿಸಿದ್ದೇ ಅಲ್ಲದೆ, ನಮ್ಮ ಧಾರ್ಮಿಕ ಶ್ರದ್ಧೆ, ನಂಬಿಕೆಗಳನ್ನೂ ಘಾಸಿ ಮಾಡಿತ್ತು.

ಎಡಪಂಥೀಯರು, ಪ್ರಗತಿಶೀಲರು, ಗುಪ್ತಗಾಮಿನಿ ಸರಸ್ವತಿಯ ಬಗ್ಗೆ ಲೇವಡಿಯನ್ನು ಮಾಡಿದ್ದರು. ಇದರ ಬಗ್ಗೆ ಬಾಬಾ ಸಾಹೇಬ್ ಆಪ್ಟೆ ಸ್ಮಾರಕ ಸಮಿತಿ, ವೇದಿಕ್ ಸರಸ್ವತಿ ನದಿ ಶೋಧ ಪ್ರತಿಷ್ಠಾನ ಮತ್ತು ಸರಸ್ವತಿ ಸಿಂಧೂರಿ ಸರ್ಚ್ ಸೆಂಟರ್ ವ್ಯಾಪಕ ಶೋಧಕಾರ್ಯವನ್ನು ಕೈಗೊಂಡವು. ವಿಭಾಗದ ಶಾಖೆಗಳಾದ ಪುರಾತತ್ವ, ಇತಿಹಾಸ, ಜಿಯಾಲಜಿ, ಇಕಾಲಜಿ, ಹೈಡ್ರಾಲಜಿ, ಗ್ಲೇಸಿಯಾಲಜಿಗಳ ವಿದ್ವಾಂಸರಿಂದ, ಸಂಶೋಧಕರಿಂದ ಕೂಡಿದ ತಂಡದ 25 ವರ್ಷಗಳ ಕಾರ್ಯ ಸರಸ್ವತಿಯನ್ನು ಹುಡುಕಿತು. ಗುಪ್ತಗಾಮಿನಿ ಸರಸ್ವತಿ ಕಟ್ಟು ಕತೆಯಲ್ಲ, ಭೂಗರ್ಭದೊಳಗೆ ಜೀವಂತವಾಗಿ ಹರಿಯುತ್ತಿರುವ ನದಿ ಎನ್ನುವುದು ಸಿದ್ಧವಾಯಿತು. ವಿದ್ವಾಂಸರಾದ ಡಾ.ಎಲ್.ಎನ್ ವಾಕಣಕರ್, ಡಾ.ಕಲ್ಯಾಣರಾಮನ್ ಮತ್ತು ಶ್ರೀ ಮೊರೊಪಚಿತ್ ಪಿಂಗಳೆ ಅವರ ತಂಡ ಇದನ್ನು ಸಾಧಿಸಿತು. ಇಂದು ರಾಜಸ್ಥಾನ, ಹರಿಯಾಣದಲ್ಲಿ ಸರಸ್ವತಿಯ ನೀರು ಪಂಪ್‌ಗಳ ಮೂಲಕ ನೀರಾವರಿಗೆ ಒದಗುತ್ತಿದೆ.

ಇದರೊಂದಿಗೆ ನಮ್ಮ ನೈಜ ಇತಿಹಾಸ, ಸಂಸ್ಕೃತಿ ಪುನರುತ್ಥಾನಗೊಳ್ಳುತ್ತಿದೆ. ನಮ್ಮ ದೇಶದ ಪ್ರಖ್ಯಾತ ವಿಜ್ಞಾನ ಸಂಸ್ಥೆಗಳಾದ ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯಾ, ಇಸ್ರೋ, ಬಾಬಾ ಅಣುಶಕ್ತಿಕೇಂದ್ರ ಮೊದಲಾದವು ಸರಸ್ವತಿ ನದಿಯ ಬಗ್ಗೆ ಮತ್ತಷ್ಟು ಸಂಶೋಧನೆಗಳನ್ನು ನಡೆಸಿವೆ.

ಹಿಂದೂ ಸಮಾಜಕ್ಕೆ, ನಂಬಿಕೆಗೆ, ಇತಿಹಾಸಕ್ಕೆ ಮಾಡಲಾಗಿದ್ದ ಇನ್ನೊಂದು ಅಪಪ್ರಚಾರ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಅಯೋಧ್ಯೆಯ ರಾಮಮಂದಿರದ ಬಗ್ಗೆ. ವಿಶ್ವ ಹಿಂದೂ ಪರಿಷತ್ತು ಮತ್ತು ಪರಿವಾರದ ಸತತ ಆಂದೋಲನಗಳಲ್ಲದೆ ವೈಜ್ಞಾನಿಕವಾಗಿ ನಡೆಸಿದ ಸಂಶೋಧನೆಗಳು, ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯಿಂದ ನಡೆದ ಉತ್ಖನನಗಳು ರಾಮ ಮಂದಿರದ ಇರುವಿಕೆಯನ್ನು ದೃಢಪಡಿಸಿದವು. ಆಂದೋಲನಗಳಷ್ಟೇ ವೈಚಾರಿಕವಾಗಿ ಪುರಾವೆಗಳ ಸಂಗ್ರಹವನ್ನೂ ವಿಶ್ವಹಿಂದೂ ಪರಿಷತ್ ಮಾಡಿತು. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಹಕಾರಿಯಾದದ್ದು ಈ ವೈಜ್ಞಾನಿಕ ಪುರಾವೆಗಳೇ.

ಸಂಘದ ಪ್ರೇರಣೆಯಿಂದ ನಮ್ಮ ದೇಶದ ಎಲ್ಲಾ ಪ್ರಾಂತೀಯ ಭಾಷೆಗಳಲ್ಲಿ ಪ್ರಾರಂಭವಾದ ಪತ್ರಿಕೆಗಳು (ಉದಾ: ವಿಕ್ರಮ, ಆರ್ಗನೈಸರ್, ಉತ್ಥಾನ, ಜಾಗೃತಿ, ಹೊಸದಿಗಂತ ಇತ್ಯಾದಿ) ರಾಷ್ಟ್ರ, ಹಿಂದೂ ಸಮಾಜ, ಸಂಘದ ವಿರುದ್ಧ ಮಾಡುವ ಮಿಥ್ಯಾರೋಪಗಳಿಗೆ, ಅಪದ್ದಗಳಿಗೆ, ಸುಳ್ಳು ಸುದ್ದಿಗಳಿಗೆ ಬಲವಾದ ಉತ್ತರಗಳನ್ನು ನೀಡುತ್ತಿವೆ. ಸಂಘ ಪ್ರೇರಣೆಯಿಂದ ಪ್ರಾರಂಭವಾಗಿರುವ ರಾಷ್ಟ್ರೋತ್ಥಾನ ಪರಿಷತ್, ಸುರುಚಿ ಪ್ರಕಾಶನ ಮೊದಲಾದವು ರಾಷ್ಟ್ರೀಯ ಸಾಹಿತ್ಯದ ಪ್ರಕಟಣೆಯಲ್ಲಿ ಮೈಲುಗಲ್ಲನ್ನು ಸ್ಥಾಪಿಸಿ ಮಾದರಿಯಾಗಿವೆ. ಅಜ್ಞಾತ ವಿಚಾರಗಳ ಬಗ್ಗೆ, ವೀರರು, ಸಾಧಕರ ಬಗ್ಗೆ ಪುಸ್ತಕಗಳನ್ನು ಹೊರತಂದಿವೆ.

ಹಿಂದೂಧರ್ಮ, ಸಂಸ್ಕೃತಿ ಮತ್ತು ಇತಿಹಾಸಗಳ ನೈಜ ಚಿತ್ರಣವನ್ನು ನೀಡುವ ವಿದ್ವಾಂಸರಾದ, ಧರ್ಮಪಾಲರ್, ರಾಮಸ್ವರೂಪ್, ಸೀತಾರಾಂ ಗೋಯೆಲ್, ದತ್ತೋಪಂತ ಠೇಂಗಡಿ, ದೀನದಯಾಳ್ ಉಪಾಧ್ಯಾಯ ಅವರ ಸಮಗ್ರ ಬರಹಗಳನ್ನು ಕನ್ನಡಕ್ಕೆ ಅನುವಾದವಾಗಿವೆ. ಇದೇ ರೀತಿಯಲ್ಲಿ ಬೇರೆ ಬೇರೆ ಪ್ರಾಂತೀಯ ಭಾಷೆಗಳ ಗ್ರಂಥಗಳ ನಿರ್ಮಾಣವಾಗಿ ಸ್ವಯಂಸೇವಕರಿಗೆ, ಸಾರ್ವಜನಿಕರಿಗೆ ನೈಜ ವಿಚಾರ, ಇತಿಹಾಸಗಳನ್ನು ತಿಳಿಸುವ ಮತ್ತು ಸುಳ್ಳಿನ ಕಂತೆಗಳು, ಅಪದ್ದಗಳನ್ನು ಬಹಿರಂಗಗೊಳಿಸುವ ಕಾರ್ಯ ನಡೆದಿದೆ.

ರಾಷ್ಟ್ರ, ಸಮಾಜ ತನ್ನ ನೈಜ ಇತಿಹಾಸ, ಸಂಸ್ಕೃತಿಗಳ ಅರಿವನ್ನು ಪಡೆಯುವುದು ಅತ್ಯಂತ ಅವಶ್ಯಕ ಸಂಗತಿ. ಇಂದಿನ ಡಿಜಿಟಲ್ ಯುಗದಲ್ಲಿ ಇದು ಸ್ವಸ್ಥ ಸಮಾಜ ನಿರ್ಮಾಣಕ್ಕೆ ಈ ಕಾರ್ಯವನ್ನು ಸಂಘಪ್ರೇರಿತ ವೈಚಾರಿಕ ಸಂಸ್ಥೆಗಳು, ವ್ಯಕ್ತಿಗಳು ನಿರಂತರ ಮಾಡುತ್ತಿದ್ದಾರೆ. "ದಿ ಮಿಥಿಕ್ ಸೊಸೈಟಿ"ಯು ಕಳೆದ ನೂರು ವರ್ಷಗಳಿಂದ, ನಮ್ಮ ಇತಿಹಾಸ, ಪರಂಪರೆ, ಸಂಸ್ಕೃತಿಗಳ ನೈಜವಾದ, ಸಂಶೋಧಿತವಾದ ವಿಚಾರಗಳನ್ನು ಉಪನ್ಯಾಸ, ವಿಚಾರಸಂಕಿರಣಗಳು ಮತ್ತು ಅದರ ತ್ರೈಮಾಸಿಕ ಪತ್ರಿಕೆಯ ಮೂಲಕ ವಿದ್ವಾಂಸರಿಗೆ, ಸಾರ್ವಜನಿಕರಿಗೆ ತಿಳಿಸುವ ಕಾರ್ಯ ಮಾಡುತ್ತಿದೆ. ಅದೇ ರೀತಿ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ' ನಮ್ಮ ಸಂಸ್ಕೃತಿ, ಪರಂಪರೆಗಳಲ್ಲಿನ ಉದಾತ್ತ ವಿಚಾರಗಳನ್ನು ಶ್ರೇಷ್ಠ ವಿದ್ವಾಂಸರ ಉಪನ್ಯಾಸಗಳ ಮೂಲಕ ಸಾದರಪಡಿಸುತ್ತಿದೆ. ●



## ಭಾವಪೂರ್ಣ ನಮನ

**ಕನ್ನಡ ಸಾಹಿತ್ಯದ ಮೇರು ಪರ್ವತ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಮತ್ತು ಪದ್ಮಭೂಷಣ ಡಾ॥ ಎಸ್.ಎಲ್. ಭೈರಪ್ಪ ನವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಭಾವಪೂರ್ಣ ನಮನಗಳನ್ನು ಸಲ್ಲಿಸುತ್ತದೆ.**

# ಶಿಕ್ಷಣ: ಆರ್.ಎಸ್.ಎಸ್.ನ ದೃಷ್ಟಿಕೋನದಲ್ಲಿ

**ಡಾ॥ ಲೋಕೇಶ್**
**ಪ್ರಾಧ್ಯಾಪಕರು, ಎನ್.ಎಂ.ಕೆ.ಆರ್.ವಿ ಕಾಲೇಜು**
**ಜಯನಗರ, ಬೆಂಗಳೂರು.**
**ಮೊಬೈಲ್–9483150527**



ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ವಿಶ್ವದ ಅತೀ ದೊಡ್ಡ ಸ್ವಯಂಸೇವಕ ಸಂಘಟನೆಯಾಗಿದೆ. ಭಾರತೀಯರಾಗಿ ನಾವೆಲ್ಲ ಗರ್ವಪಡುವಂತಹ ಸಂಘಟನೆಯೇ ಆರ್‌ಎಸ್‌ಎಸ್. 1925, ಸೆಪ್ಟೆಂಬರ್ 27, ವಿಜಯದಶಮಿಯ ದಿನ ಮಹಾರಾಷ್ಟ್ರದ ನಾಗಪುರದಲ್ಲಿ ಪರಮ ಪೂಜ್ಯನೀಯ ಡಾ॥ ಕೇಶವ ಬಲಿರಾಂ ಹೆಡಗೆವಾರ್‌ರವರಿಂದ ಸ್ಥಾಪಿತಗೊಂಡ ಸ್ವಯಂಸೇವಕ ಸಂಘಟನೆಯೇ ಆರ್‌ಎಸ್‌ಎಸ್. ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳನ್ನು ಒಟ್ಟಾಗಿ 'ಸಂಘ ಪರಿವಾರ' ಎಂದು ಕರೆಯಲಾಗುತ್ತದೆ. 2025, ಸೆಪ್ಟೆಂಬರ್ 27ಕ್ಕೆ ಆರ್‌ಎಸ್‌ಎಸ್ ತನ್ನ ಅಸ್ಥಿತ್ವದ ನೂರು ಸಂವತ್ಸರಗಳನ್ನು ಪೂರೈಸುತ್ತಿರುವ ಶುಭ ಸಂದರ್ಭದಲ್ಲಿ ಸಂಘ ಸವೆಸಿದ ಹಾದಿ ನಮಗೆಲ್ಲರಿಗೂ ಪ್ರೇರಣಾದಾಯಕ ಎಂದರೆ ಉತ್ಪ್ರೇಕ್ಷೆಯಲ್ಲ. ಭಾರತದ ಇತಿಹಾಸದಲ್ಲಿ ಸಂಘದ ವಿಕಸನಕ್ಕೆ ತನ್ನದೇ ಆದ ಮಹತ್ವವಿದೆ. ಸಂಘದ ಅಸ್ಥಿತ್ವ ಮತ್ತು ವಿಕಸನ ಸಮಾಜವನ್ನು, ಒಟ್ಟಾರೆ ರಾಷ್ಟ್ರವನ್ನು ಹೇಗೆ ಸದೃಢವಾಗಿ ಕಟ್ಟಬೇಕೆಂಬ ಸಂಕಲ್ಪಕ್ಕೆ ಜೀವಂತ ನಿದರ್ಶನವಾಗಿದೆ.

ಆರ್‌ಎಸ್‌ಎಸ್ ನಿಸ್ವಾರ್ಥ ಸೇವೆ, ಶಿಸ್ತು ಮತ್ತು ಏಕತೆ, ಜೀವನ, ರಾಷ್ಟ್ರೀಯ ಹೆಮ್ಮೆ, ಚಾರಿತ್ರ್ಯ ಬೆಳವಣಿಗೆ, ಸಾಮಾಜಿಕ ಸಾಮರಸ್ಯ, ವ್ಯಕ್ತಿ ಸದೃಢತೆ, ನಾಯಕತ್ವ ಬೆಳವಣಿಗೆ, ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಕೈಗೊಂಡು ಪರಿಹಾರ ಕಾರ್ಯ, ಶಿಕ್ಷಣ, ಸಮುದಾಯದ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡ ಲಕ್ಷಾಂತರ ಸ್ವಯಂಸೇವಕರ ದೃಢ ಸಂಕಲ್ಪವೇ ಇಂದು ಸಂಘವನ್ನು ಶತಮಾನದ ಸಂಭ್ರಮದಲ್ಲಿರಿಸಿದೆ. ಭಾರತವನ್ನು ಸದೃಢ ರಾಷ್ಟ್ರವನ್ನಾಗಿ ಮನ್ವಂತರಗೊಳಿಸಿದ ಸಂಘದ ಸೇವೆ ಇತಿಹಾಸದಲ್ಲಿ ಸದಾ ಸ್ಮರಣೀಯವಾದದ್ದು. ಪ್ರಸ್ತುತ ಆರ್‌ಎಸ್‌ಎಸ್ ಸರಸಂಘಚಾಲಕರಾದ ಮಾನನೀಯ ಮೋಹನ್ ಭಾಗವತ್ ಜೀಯವರು ಸೇವೆ ಸಲ್ಲಿಸುತ್ತಿದ್ದಾರೆ.

ಆರ್‌ಎಸ್‌ಎಸ್ ಶತಮಾನೋತ್ಸವ ಸಂಭ್ರಮಾಚರಣೆಯ ಕಾರ್ಯಕ್ರಮ ನವದೆಹಲಿಯಲ್ಲಿ ಆಯೋಜನೆಗೊಂಡ ಸಂದರ್ಭದಲ್ಲಿ ಮಾನನೀಯ ಸರಸಂಘಚಾಲಕರಾದ ಮೋಹನ್‌ಭಾಗವತ್ ಜೀಯವರು ಮಾಡಿದ ದಿಕ್ಸೂಚಿ ಭಾಷಣದಲ್ಲಿ ಶಿಕ್ಷಣದ ಬಗ್ಗೆ ಆರ್‌ಎಸ್‌ಎಸ್ ನಿಲುವುಗಳನ್ನು ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸಿ ದೇಶವಾಸಿಗಳ ಗಮನ ಸೆಳೆದಿದ್ದಾರೆ. ಅವರ ಸವಿಸ್ತಾರವಾದ ಭಾಷಣದ ಮುಖ್ಯಾಂಶ ವಿಶೇಷವಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಇವೆ.

## ಸಮಗ್ರತಾ ಶಿಕ್ಷಣ

ಶಿಕ್ಷಣ ಕೇವಲ ಮಾಹಿತಿ ರವಾನೆ ಮತ್ತು ಸಾಕ್ಷರತೆ ಅಲ್ಲ. ಆದರೆ ಚಾರಿತ್ರ್ಯ ಬೆಳೆಸುವಂತಿರಬೇಕು, ವಿವೇಕ ತುಂಬುವಂತಿರಬೇಕು. ಶಿಕ್ಷಣ, ಪೂರ್ಣ ಸುಸಂಸ್ಕೃತ ಮಾನವನನ್ನು ಸೃಜಿಸಬೇಕೇ ಹೊರತು ತಾಂತ್ರಿಕ ಕೌಶಲ್ಯದ ತರಬೇತಿ ಅಲ್ಲ ಎಂದಿದ್ದಾರೆ.

## ಶಿಕ್ಷಣದ ಉದ್ದೇಶ

ಶಿಕ್ಷಣದ ಉದ್ದೇಶ ಕೇವಲ ಸಾಕ್ಷರತೆ ಅಥವಾ ವೃತ್ತಿಪರ ಕೌಶಲ್ಯವಲ್ಲ. ಬದಲಿಗೆ ಶಿಕ್ಷಣ ಪ್ರತಿಯೊಬ್ಬರನ್ನು ನ್ಯಾಯಪರ, ಜವಾಬ್ದಾರಿಯುತ, ಸಂಸ್ಕೃತಿಯಲ್ಲಿ ಆಳವಾದ ಬೇರುಗಳುಳ್ಳ ಪರಿಪೂರ್ಣ ಮನುಷ್ಯನನ್ನಾಗಿ ಸೃಜಿಸಬೇಕು.

## ಸಂಸ್ಕೃತಿ ಮತ್ತು ಮೌಲ್ಯಗಳು

ನಿಜವಾದ ಶಿಕ್ಷಣ ಕಲಿಕಾರ್ಥಿಯನ್ನು ಆತನ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆಯಬೇಕು. ಮೌಲ್ಯಗಳಾದ ಗೌರವಿಸುವಿಕೆ, ನಮ್ರತೆ, ಉತ್ತಮ ನಡವಳಿಕೆ, ಜವಾಬ್ದಾರಿ ಇನ್ನೂ ಮುಂತಾದವುಗಳು ಕಲಿಕೆಯೊಂದಿಗೆ ಸಂಲಗ್ನತೆ ಹೊಂದಿರಬೇಕು. ಮೇಲ್ಕಂಡ ಎಲ್ಲಾ ಮೌಲ್ಯಗಳು ಸಾರ್ವತ್ರಿಕವಾದವುಗಳು, ಇವುಗಳು ಯಾವುದೇ ಮತದೊಂದಿಗೆ ತಳುಕುಹಾಕಿಕೊಂಡಿಲ್ಲ.

## ವಸಾಹತುಶಾಯಿ ಮಾದರಿಯ ವಿಮರ್ಶೆ

ಭಾರತದ ಸಂಪ್ರದಾಯಿಕ ಜ್ಞಾನ ಪರಂಪರೆಯನ್ನು ಉದ್ದೇಶಪೂರ್ವಕವಾಗಿ ಆಕ್ರಮಣಕಾರರು ಮತ್ತು ವಸಾಹತುಶಾಯಿಗಳು ಛಿದ್ರಗೊಳಿಸಿದ್ದಾರೆ ಎಂಬುದು ನಿರ್ವಿವಾದ. ವಸಾಹತುಶಾಯಿ ಶಿಕ್ಷಣ ಭಾರತೀಯರಲ್ಲಿ ಗುಲಾಮಿ ಮನಸ್ಥಿತಿಯನ್ನು ಉತ್ತೇಜಿಸಿದೆ ಹಾಗೂ ಭಾರತೀಯರನ್ನು ಅವರ ಮೂಲಬೇರುಗಳಿಂದ ಬೇರ್ಪಡಿಸಿದೆ. ಗರ್ವ, ಸ್ವಯಂಗೌರವ ಮತ್ತು ತಮ್ಮತನವನ್ನು ಪುನರ್ ಸ್ಥಾಪಿಸಲು ಸುಧಾರಣೆಗಳು ಅತ್ಯಗತ್ಯ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

## ಶಿಕ್ಷಣದಲ್ಲಿ ತಾಂತ್ರಿಕತೆ

ತಾಂತ್ರಿಕತೆ ಉಪಯುಕ್ತತೆ ಹೊಂದಿದೆ, ಆದರೆ ತಾಂತ್ರಿಕತೆಯನ್ನು ಒಂದು ಸಾಧನವಾಗಿ ಬಳಸಿಕೊಳ್ಳಬೇಕೇ ಹೊರತು ತಾಂತ್ರಿಕತೆ ಶಿಕ್ಷಣದ ಮೇಲೆ ಆಧಿಪತ್ಯ ಸಾಧಿಸಲು ಅಲ್ಲ. ನಿಜವಾದ ಶಿಕ್ಷಣಕ್ಕೆ ಸಂವೇದನಾಶೀಲ ಮಾನವನ ಮಾರ್ಗದರ್ಶನ ಮತ್ತು ಸಮತೋಲನತೆ ಬೇಕಾಗುತ್ತದೆ. ತಾಂತ್ರಿಕತೆ ಮಾನವ ಕಲ್ಯಾಣಕ್ಕೆ ನೆರವಾಗಬೇಕೇ ಹೊರತು, ಮೌಲ್ಯ ಮತ್ತು ವಿವೇಕಗಳನ್ನು ಮರೆಮಾಡಬಾರದು. ಚಾರಿತ್ರ್ಯವಿಲ್ಲದ ತಾಂತ್ರಿಕತೆ ಹೆಚ್ಚು ಅಪಾಯಕಾರಿಯಾದದ್ದು. ತಾಂತ್ರಿಕತೆಯನ್ನು ಹೆಚ್ಚು ಜವಾಬ್ದಾರಿಯುತವಾಗಿ ಮತ್ತು ಹೊಣೆಗಾರಿಕೆಯಿಂದ ಬಳಸಬೇಕು ಎಂದಿದ್ದಾರೆ.

## ಭಾಷೆ, ಸಂಸ್ಕೃತ ಮತ್ತು ಮಾಧ್ಯಮ

ಭಾರತೀಯ ಭಾಷೆಗಳೇ ಶಿಕ್ಷಣದ ಜೀವಾಳವಾಗಬೇಕು. ಕೇವಲ ಆಂಗ್ಲ ಭಾಷೆಗೆ ಮಾತ್ರ ಪ್ರಾಮುಖ್ಯತೆ ಇರಬಾರದು. ಭಾರತೀಯ ಸಂಸ್ಕೃತಿ ಅರ್ಥೈಯಿಸಿಕೊಳ್ಳಲು ಸಂಸ್ಕೃತ ಭಾಷೆ ಬಹುಮೌಲ್ಯ ಯುತವಾದದ್ದು. ಆದ ಕಾರಣ ಸಂಸ್ಕೃತ ಭಾಷೆಯನ್ನು ಆಸಕ್ತಿಯಿಂದ ಬೋಧಿಸಬೇಕೇ ಹೊರತು ಕಡ್ಡಾಯದಿಂದಲ್ಲ. ಭಾರತೀಯ

ಪುಟ 6 ಕ್ಕೆ ➤

➢ ಪುಟ 5 ರಿಂದ.....

ನಾಗರೀಕತೆಯ ಸಾರವೇ ಸಂಸ್ಕೃತ. ಆದ್ದರಿಂದ ಸಂಸ್ಕೃತವನ್ನು ಪ್ರೇರಣೆಯುಂಟುವಮಾಡುವಂತೆ ಬೋಧಿಸಬೇಕೇ ಹೊರತು ಬಲವಂತದಿಂದಲ್ಲ. ಭಾಷೆ ಕೇವಲ ಒಂದು ಮಾಧ್ಯಮವಾಗಿ ಶಿಕ್ಷಣದಲ್ಲಿ ಮೌಲ್ಯಗಳು ಮತ್ತು ಸಾರ್ವತ್ರಿಕ ತತ್ವಗಳನ್ನು ಪಸರಿಸಿದರಷ್ಟೇ ಸಾಕು.

## ರಾಷ್ಟ್ರೀಯ ಶಿಕ್ಷಣ ನೀತಿ–2020

ಆರ್‌ಎಸ್‌ಎಸ್ ಮಾನನೀಯ ಸರಸಂಘಚಾಲಕರಾದ ಪೂಜ್ಯನೀಯ ಮೋಹನ್ ಭಾಗವತ್‌ಜೀಯವರು ರಾಷ್ಟ್ರೀಯ ಶಿಕ್ಷಣ ನೀತಿ–2020 ಅತ್ಯಂತ ಮಹತ್ವದ ಧನಾತ್ಮಕ ಹೆಜ್ಜೆ ಎಂದು ಪ್ರಶಂಸಿಸಿದ್ದಾರೆ. ಸಮಗ್ರತಾ ಶಿಕ್ಷಣದ ಗುರಿಯನ್ನು ಹೊಂದಿರುವ "ಪಂಚಕೋಶಿಯ ಮಾದರಿ" ಕ್ರಮವನ್ನು ಸ್ವಾಗತಿಸಿದ್ದಾರೆ. 'ಪಂಚಕೋಶಿಯ ಮಾದರಿ' ಯೆಂದರೆ ಮಾನವನ ವ್ಯಕ್ತಿತ್ವದ ಐದು ಸ್ತರಗಳು ಅಥವಾ ವಲಯಗಳ ಪೂರ್ಣ ಅಭಿವೃದ್ಧಿಯೇ ಆಗಿದೆ.

ಭಾರತೀಯ ವೇದಾಂತ ಜ್ಞಾನಪರಂಪರೆಯ ಅನುಸಾರ ಮಾನವನ ವ್ಯಕ್ತಿತ್ವದ ಐದು ಸ್ತರಗಳು ಇಂತಿವೆ.

ಅನ್ನಮಯ ಕೋಶ (ಭೌತಿಕ ಶರೀರ)

ಪ್ರಾಣಮಯ ಕೋಶ (ಜೀವ ಶಕ್ತಿ)

ಮನೋಮಯ ಕೋಶ (ಮಾನಸಿಕ – ಭಾವನಾತ್ಮಕ)

ವಿಜ್ಞಾನಮಯ ಕೋಶ (ಬುದ್ಧಿಮತ್ತೆ – ವಿವೇಕ)

ಆನಂದಮಯ ಕೋಶ (ಪರಮಾನಂದ – ಪ್ರಜ್ಞೆ)

## ಸರ್ವಗ್ರಾಹಿ ಅಥವಾ ಅಂತರ್ಗತ ಶಿಕ್ಷಣ

ಶಿಕ್ಷಣವು ಸರ್ವಗ್ರಾಹಿ ಅಥವಾ ಅಂತರ್ಗತದ ದೃಷ್ಟಿಕೋನವನ್ನು ಹೊಂದಿರಬೇಕು. ಎಲ್ಲರನ್ನು ಒಳಗೊಳ್ಳುವ ಶಿಕ್ಷಣದ ಅಗತ್ಯತೆ ಇಂದು ಹೆಚ್ಚಾಗಿದೆ. ಇಂತಹ ಶಿಕ್ಷಣ ಮಾತ್ರ ರಾಷ್ಟ್ರೀಯ ಚಾರಿತ್ರ್ಯ, ಏಕತೆ ಮತ್ತು ಪರಸ್ಪರ ಗೌರವಾದರಗಳನ್ನು ಬೆಳೆಸಲು ಸಾಧ್ಯ. ಸಮಾಜದಲ್ಲಿನ ಎಲ್ಲಾ ಸಮುದಾಯಗಳು ಪರಸ್ಪರ ಅನುಬಂಧದ ಮೂಲಕ ಪರಂಪರೆಯನ್ನು ಹಂಚಿಕೊಳ್ಳಬೇಕು.

ಶಿಕ್ಷಣ ಪ್ರತಿಯೊಬ್ಬ ಮಗುವಿನಲ್ಲೂ ಯಾವುದೇ ಮತ ಹಾಗೂ ಸಮುದಾಯ ಭೇದವಿಲ್ಲದೆ ರಾಷ್ಟ್ರದ ಬಗ್ಗೆ, ಪರಂಪರೆಯ ಬಗ್ಗೆ ಮತ್ತು ರಾಷ್ಟ್ರದ ಭವಿಷ್ಯದ ಬಗ್ಗೆ ಗರ್ವ ಪಡುವಂತೆ ಮಾಡಬೇಕಾಗುತ್ತದೆ ಎಂದಿದ್ದಾರೆ.

ಒಟ್ಟಾರೆ ಪ್ರಸಕ್ತ ಸಂದರ್ಭದಲ್ಲಿ ಭಾರತಕ್ಕೆ ಅವಶ್ಯವಿರುವ ಶಿಕ್ಷಣದ ಬಗ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಿಲುವುಗಳನ್ನು ತಮ್ಮದೇ ಮಾತಿನ ದಾಟಿಯಲ್ಲಿ ದೇಶವಾಸಿಗಳ ಗಮನ ಸೆಳೆದ ಸರಸಂಘಚಾಲಕರಾದ ಪೂಜ್ಯನೀಯ ಮೋಹನ್‌ಭಾಗವತ್ ಜೀಯವರ ಪ್ರಯತ್ನ ಶ್ಲಾಘನೀಯವಾದದ್ದು ಮತ್ತು ಅಭಿನಂದನಾರ್ಹ ವಾದದ್ದು.

ಉತ್ತಮ ಗುಣಮಟ್ಟದ ಶಿಕ್ಷಣ ಮಾತ್ರ ದೇಶವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಲು ಸಾಧ್ಯ. ಈ ನಿಟ್ಟಿನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಘದ ಆಶಯ ಮತ್ತು ರಾಷ್ಟ್ರದ ಪುರೋಭಿವೃದ್ಧಿ ಒಂದೇ ನಾಣ್ಯದ ಎರಡು ಮುಖಗಳು ಎಂದರೆ ಅತಿಶಯೋಕ್ತಿಯಲ್ಲ. ಸಂಘದ ಇಂತಹ ಶಿಕ್ಷಣದ ಪರಿಕಲ್ಪನೆಯ ಸಾಕಾರ ಮಾತ್ರ ಭಾರತವನ್ನು ಸದೃಢ, ಸಮರ್ಥ, ಸ್ವದೇಶಿ, ಆತ್ಮನಿರ್ಭರ ಭಾರತವನ್ನಾಗಿ ಮಾಡಲು ಸಾಧ್ಯ. ●

# ಶಿಕ್ಷಕರ ದಿನಾಚರಣೆ ಕಾರ್ಯಕ್ರಮ – ಬೀದರ್ ಜಿಲ್ಲೆ

ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ಉದ್ಯೋಗದಲ್ಲಿ ಶೇ100ರಷ್ಟು ಮೀಸಲಾತಿ ಕಲ್ಪಿಸಲು ಸರ್ಕಾರದ ಮೇಲೆ ಒತ್ತಡ ತರಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ.ನಮೋಶಿ ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ ಘಟಕ ನಗರದ ಕೆ.ಆರ್.ಇ ಸಂಸ್ಥೆಯ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ಸ್ವಾತಂತ್ರ್ಯ ಹೋರಾಟಗಾರ ವೀರಯ್ಯ ಸ್ವಾಮಿ ಅವರ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸದ್ಯ ಕಾಯ್ದೆಯಡಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಶೇ80ರಷ್ಟು ಮೀಸಲು ಸೌಲಭ್ಯ ಇದೆ ಎಂದು ತಿಳಿಸಿದರು. 1995ರ ನಂತರ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವುದು ಸೇರಿ ಶಿಕ್ಷಣ ಸಂಸ್ಥೆಗಳ ಹಾಗೂ ಶಿಕ್ಷಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪರಮೇಶ್ವರ ಬಿರಾದಾರ ಮಾತನಾಡಿ, ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಸಂಘ ಸದಾ ಸಿದ್ಧವಿದೆ, ಶಿಕ್ಷಕರನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಸಂಘ ಬರುವ ದಿನಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಹೇಳಿದರು.

ಪ್ರೊ.ಎಸ್.ಬಿ ಬಿರಾದಾರ ಮಾತನಾಡಿ ವೀರಯ್ಯ ಸ್ವಾಮಿ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರ ದೇಶ ಭಕ್ತಿ ಯುವಕರಿಗೆ ಪ್ರೇರಣೆಯಾಗಬೇಕು ಎಂದು ತಿಳಿಸಿದರು.

ಲೇಖಕ ನಾಗಯ್ಯ ಸ್ವಾಮಿ ಅವರು ಸ್ವಾತಂತ್ರ್ಯ ಹೋರಾಟಗಾರ ವೀರಯ್ಯ ಸ್ವಾಮಿ ಕೃತಿಯನ್ನು ಪರಿಚಯಿಸಿದರು. ಸಂಘದ ಜಿಲ್ಲಾ ಘಟಕದ ಗೌರವ ಸಲಹೆಗಾರ ಬಸವರಾಜ ಸ್ವಾಮಿ ಹೆಡಗಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಅನುದಾನಿತ ಪದವಿಪೂರ್ವ ಉಪನ್ಯಾಸಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ವಿಜಯಕುಮಾರ ಪಾಟೀಲ ಹೆಡಗಾಪುರ ಹಾಗೂ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಹೆಡಗಾಪುರದ ಶಿವಲಿಂಗ ಶಿವಾಚಾರ್ಯ, ದಾರುಕಲಿಂಗ ಶಿವಾಚಾರ್ಯ, ರಜನೀಯವಾಲಿ, ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ವಿಜಯಕುಮಾರ ಪಾಟೀಲ ಯರನಳ್ಳಿ, ರಾಮಕೃಷ್ಣನ್ ಸಾಳೆ, ರಾಜಶೇಖರ ಮಂಗಲಗಿ, ಚಂದ್ರಶೇಖರ ಪಾಟೀಲ, ಸಿದ್ದಮ್ಮ, ನರಸಾರೆಡ್ಡಿ, ಬಳಿರಾಮ ಕುರನಾಳೆ, ಉಮೇಶ ಪಾಟೀಲ, ಸತೀಶ ಬಿರಾದಾರ, ಸಂತೋಷ ಮಂಗಳೂರೆ, ಲಕ್ಷ್ಮಣ ಪೂಜಾರಿ, ಸಂತೋಷ ಸೋಲಪುರೆ ಸೇರಿದಂತೆ ಇತರರು ಇದ್ದರು. ●

# ಶಿಕ್ಷಣ, ಸಮಯ ಶ್ರೇಷ್ಠ ಸಂಪತ್ತು– ಕಲಬುರ್ಗಿ ಜಿಲ್ಲೆಯಲ್ಲಿ ಪ್ರತಿಭಾ ಪುರಸ್ಕಾರ

ಶಿಕ್ಷಣವು ಹಲವರ ಬದುಕು, ಕುಟುಂಬಗಳು, ಸಮಾಜಗಳು ಹಾಗೂ ರಾಷ್ಟ್ರಗಳನ್ನು ಬದಲಿಸಿದೆ. ಶಿಕ್ಷಣ ಹಾಗೂ ಗುಣಮಟ್ಟದ ಸಮಯ ನಾವು ಮಕ್ಕಳಿಗೆ ಕೊಡಬಹುದಾದ ಶ್ರೇಷ್ಠ ಸಂಪತ್ತಾಗಿವೆ ಎಂದು ನಗರ ಪೋಲೀಸ್ ಕಮಿಷನರ್ ಶರಣಪ್ಪ.ಎಸ್.ಡಿ ಹೇಳಿದರು.

ನಗರದ ಎಂಆರ್‌ಎಂಸಿ ಸ್ಯಕ್ ಸಭಾಂಗಣದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಸಕ್ತ ಸಮಾಜದಲ್ಲಿ ಮಕ್ಕಳು ಹಲವು ಬಗೆಗೆ ಚಿತ್ತಭಂಗಗಳನ್ನು ಎದುರಿಸುತ್ತಿದ್ದಾರೆ. ಮೊಬೈಲ್ ಫೋನ್ ಗೆಳೆಯರ ಒತ್ತಡ, ಪಾಲಕರ ಒತ್ತಡ, ಶಿಕ್ಷಣ ಸಂಸ್ಥೆಗಳ ಒತ್ತಡ ಹಾಗೂ ಪಾಲಕರು–ಶೈಕ್ಷಣಿಕ ಸಂಸ್ಥೆಗಳ ಎಂದೂ ಮುಗಿಯದ ಬೇಡಿಕೆ–ನಿರೀಕ್ಷೆಗಳ ವರ್ತುಲದಲ್ಲಿ ಸಿಲುಕಿದ್ದಾರೆ. ಅಂಕಗಳು ಹಾಗೂ ಪದವಿಗಳು ಯಾರೊಬ್ಬರ ನಿರ್ಧಾರಿತ ಭವಿಷ್ಯ ರೂಪಿಸಲಾರವು. ಶಿಕ್ಷಣ ಅಂದರೆ ಬರೀ ಅಂಕಗಳಲ್ಲ. ಅದು ವ್ಯಕ್ತಿಯೊಬ್ಬರ ಸಮಗ್ರ ಅಭಿವೃದ್ಧಿಯಾಗಿದೆ. ಒಬ್ಬರಲ್ಲಿ ಧೈರ್ಯ ಬೆಳೆಸಿ, ಆತ್ಮವಿಶ್ವಾಸ ವೃದ್ಧಿಸಿ, ವ್ಯಕ್ತಿತ್ವವನ್ನು ನಿರ್ಮಿಸಿ ಸಮಾಜಕ್ಕಾಗಿ ಅವರನ್ನು ಸಜ್ಜುಗೊಳಿಸುವುದೇ ಶಿಕ್ಷಣವಾಗಿದೆ. ಶಿಸ್ತು ಹಾಗೂ ಪ್ರಾಮಾಣಿಕ ಯಶಸ್ಸು ತಂದುಕೊಡಬಲ್ಲ ಸಾಧನಗಳು' ಎಂದು ಪ್ರತಿಪಾದಿಸಿದರು.

ಬಿ.ಆರ್.ಅಂಬೇಡ್ಕರ್ ಆಗಲಿ, ಎಪಿಜೆ ಅಬ್ದುಲ್ ಕಲಾಂ ಅವರಾಗಲಿ ನಮ್ಮನಿಮ್ಮಂತೆಯೇ ಬದುಕಿದವರು. ಆದರೆ ಶಿಕ್ಷಣ ಅವರನ್ನು ಅಮರರನ್ನಾಗಿಸಿದೆ. ಸಮಾಜಕ್ಕೆ ಸತ್ಪ್ರಜೆಗಳನ್ನು ರೂಪಿಸುವಲ್ಲಿ ಪ್ರತಿಯೊಬ್ಬರು ಶಿಕ್ಷಕರೂ ನಡೆ–ನುಡಿ, ಬೋಧನೆ– ಜ್ಞಾನದ ಮೂಲಕ ಮಕ್ಕಳ ಮೇಲೆ ಶಾಶ್ವತವಾದ ಪ್ರಭಾವ ಬೀರುತ್ತಾರೆ ಎಂದರು.

ಹಲವು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪಿಯುಸಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಕೊನೆಯ ಸ್ಥಾನಗಳಲ್ಲೇ ಇರುತ್ತವೆ. ಅದನ್ನು ಯಾರು ಬದಲಿಸಬೇಕು? ಶಿಕ್ಷಕರು, ಶಿಕ್ಷಣ ಸಂಸ್ಥೆಗಳು, ಪಾಲಕರು ಹಾಗೂ ವಿದ್ಯಾರ್ಥಿಗಳು ಎಲ್ಲರೂ ಸೇರಿ ಕೈಜೋಡಿಸಿದಾಗ ಫಲಿತಾಂಶ ಬದಲಿಸುವುದು ಅಸಾಧ್ಯವಲ್ಲ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಮಾತನಾಡಿದರು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಯಡ್ರಾಮಿಯ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿದರು.

ಎ.ಬಿ.ಆರ್‌ಎಸ್‌ಎಂ, ಸಿಯುಕೆ ಘಟಕದ ಅಧ್ಯಕ್ಷ ಪ್ರೊ॥ ಚನ್ನವೀರ ಆರ್.ಎಂ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯದರ್ಶಿ ಮಹೇಶ ಬಸರಕೋಡ, ಕಲಬುರಗಿ ವಿಭಾಗೀಯ ಪ್ರಮುಖ ಚಂದ್ರಶೇಖರ ಪಾಟೀಲ, ಸಂಘದ ಜಿಲ್ಲಾಧ್ಯಕ್ಷ ಸಂಜೀವಕುಮಾರ ಪಾಟೀಲ ವೇದಿಕೆಯಲ್ಲಿದ್ದರು. ●

## ಶಾರ್ಟ್‌ಕಟ್ ಎಂದಿಗೂ ಪತನದ ಪಥ

**ವಿದ್ಯಾರ್ಥಿಗಳು ಅಂಕದ ಬೆನ್ನು ಹತ್ತದೇ ಜ್ಞಾನದ ಬೆನ್ನು ಹತ್ತಬೇಕು ಎಂದು ಕರ್ನಾಟಕ ಕೇಂದ್ರೀಯ ವಿ.ವಿ ಸಹ ಪ್ರಾಧ್ಯಾಪಕ ಗಣಪತಿ ಸಿನ್ನೂರ ಹೇಳಿದರು.**

**ಉಪನ್ಯಾಸ ನೀಡಿದ ಅವರು ದೊಡ್ಡ ಕಂಪನಿಯಲ್ಲಿ ಸಿಗುವ ಉದ್ಯೋಗವನ್ನು ಯಶಸ್ವಿಯಾಗಿ ನಿಭಾಯಿಸಲು ಮಕ್ಕಳು ಬಹು ಆಯಾಮದಲ್ಲಿ ಬೆಳೆಯಬೇಕಿದೆ ಎಂದು ಹೇಳಿದರು.**

**ಅಂಕಗಳೊಂದಿಗೆ ಮೌಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕಿದೆ. ಸಾಧಿಸುವ ಛಲದಲ್ಲಿ ಶಾರ್ಟ್‌ಕಟ್ (ಅಡ್ಡದಾರಿ) ಬಳಸಿದರೆ, ಅದು ಪತನಕ್ಕೆ ಕಾರಣವಾಗುತ್ತದೆ. ಉದ್ಯೋಗ ಆಧಾರಿತ ಶಿಕ್ಷಣಕ್ಕಿಂತಲೂ ವ್ಯಕ್ತಿತ್ವ ರೂಪಿಸುವಂಥ ಶಿಕ್ಷಣ ಬೇಕಿದೆ. ಬದುಕಿನಲ್ಲಿ ಎದುರಾಗುವ ಸಮಸ್ಯೆ ಸವಾಲುಗಳನ್ನು ಮೆಟ್ಟಿನಿಲ್ಲುವಂಥ ವ್ಯಕ್ತಿತ್ವವನ್ನು ಮಕ್ಕಳಲ್ಲಿ ಬೆಳೆಸಬೇಕಿದೆ. ಪ್ರತಿಭಾನ್ವಿತ ವಿದ್ಯಾರ್ಥಿಗಳು ಬೆಳೆದು ಮೆಡಿಷಿನ್ ಕ್ಷೇತ್ರದಲ್ಲಿ ಭಾರತಕ್ಕೆ ನೊಬೆಲ್ ಪ್ರಶಸ್ತಿ ತರಲಿ ಎಂದು ಆಶಿಸಿದರು.**



ರಾಣಿ ಅಬ್ಬಕ್ಕ ದೇವಿ–500ನೇ ಶತಮಾನೋತ್ಸವ, ಅಹಲ್ಯಾಬಾಯಿ ಹೋಳ್ಕರ್–300ನೇ ಶತಮಾನೋತ್ಸವ, ರಾಣಿ ಚೆನ್ನಮ್ಮ–200ನೇ ಶತಮಾನೋತ್ಸವ ಕಾರ್ಯಕ್ರಮ ಕ್ರೈಸ್ಟ್ ವಿಶ್ವವಿದ್ಯಾಲಯ, ಬೆಂಗಳೂರು

## ಓದುಗರ ಸ್ಪಂದನೆ

**ಶಿಕ್ಷಕ ಸಮಾಚಾರ ಪತ್ರಿಕೆಯು ಒಂದು ಒಳ್ಳೆಯ ವಿಷಯವನ್ನು ಜ್ಞಾನವನ್ನು ತಿಳಿಸುವ ಪತ್ರಿಕೆಯಾಗಿದೆ. ಈ ಪತ್ರಿಕೆಯನ್ನು ಓದಿದ ನನಗೆ ಆದ ಪ್ರೇರಣೆ ಎಂದರೆ ಎಲ್ಲಾ ಬರಹಗಾರರಿಗೂ ಮೊದಲು ಧನ್ಯವಾದಗಳು ತಿಳಿಸಲು ಬಯಸುತ್ತೇನೆ. ಶ್ರೇಷ್ಠ ಉಪಾಧ್ಯಾಯ, ನವರಾತ್ರಿ ಉತ್ಸವ, ಆರೋಗ್ಯದ ಚಿಂತನೆ,ಗುರುವಂದನಾ ಕಾರ್ಯಕ್ರಮಗಳು ಇವುಗಳ ಬಗ್ಗೆ ತಿಳಿಸಿರುವ ಮಾಹಿತಿಯು ತುಂಬಾ ಜ್ಞಾನದಾಯಕವಾಗಿದೆ. ಪತ್ರಿಕೆಯು ಚಿಕ್ಕದಾಗಿ ಚೊಕ್ಕದಾದ ಮಾಹಿತಿಯನ್ನು ಹೊಂದಿರುತ್ತದೆ. ಧನ್ಯವಾದಗಳು.**

**– ಸೀತಾಭಟ್, ಶಿಕ್ಷಕಿ**




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಬೆಂಗಳೂರು

(ಸಂಲಗ್ನತೆ –ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ABRSM)

**KARNATAKA RAJYA MADHYMIKA SHIKSHAK SANGH**

(Affiliated to Akhila Bharatiya Rashtriya Shikshik Mahasangh-New Delhi)

No-55, Yadav Smruti, Sheshadripuram, Bangalore

"ನಮ್ಮ ವಿದ್ಯಾಲಯ ನಮ್ಮ ಸ್ವಾಭಿಮಾನ"

**"OUR SCHOOL- OUR PRIDE"**

| Sl. No. | District | Total Schools/Colleges | Participate Students | Participate Teachers | Participate Students & Teachers |
|---|---|---|---|---|---|
| 1 | Bidar | 16 | 2600 | 175 | 2775 |
| 2 | Kalburgi | 09 | 2980 | 108 | 3088 |
| 3 | Yadgiri | 18 | 3200 | 200 | 3400 |
| 4 | Raichur | 19 | 4600 | 74 | 4674 |
| 5 | Koppal | 44 | 7300 | 193 | 7493 |
| 6 | Bellary | 25 | 6000 | 135 | 6135 |
| 7 | Vijayanagar | 52 | 18000 | 450 | 18450 |
| 8 | Vijayapur | 48 | 12000 | 300 | 12300 |
| 9 | Baglkote | 85 | 21000 | 752 | 21752 |
| 10 | Belagum | 14 | 2900 | 139 | 3039 |
| 11 | Chikkodi | 13 | 1400 | 150 | 1550 |
| 12 | Dharwad | 294 | 28000 | 2460 | 29460 |
| 13 | Gadag | 12 | 1100 | 96 | 1196 |
| 14 | Haveri | 12 | 985 | 56 | 1041 |
| 15 | Karwar | 10 | 840 | 43 | 883 |
| 16 | Davangere | 25 | 3700 | 299 | 3999 |
| 17 | Chitradurga | 190 | 22800 | 2200 | 25000 |
| 18 | Tumkur | 60 | 6500 | 700 | 7200 |
| 19 | Madhugiri | 25 | 3000 | 300 | 3300 |
| 20 | Kolar | 02 | 1000 | 31 | 1031 |
| 21 | Chikkaballapur | 06 | 3000 | 120 | 3120 |
| 22 | Bangalore North | 23 | 4900 | 180 | 5080 |
| 23 | Bangalore South | 21 | 19150 | 244 | 19394 |
| 24 | Bangalore Rural | 06 | 2100 | 49 | 2149 |
| 25 | Ramanagar | 01 | 500 | 20 | 520 |
| 26 | Mysore | 38 | 4700 | 290 | 4990 |
| 27 | Mandya | 10 | 2200 | 85 | 2285 |
| 28 | Hasan | 08 | 1300 | 23 | 1323 |
| 29 | Chamrajnagar | 06 | 1700 | 29 | 1729 |
| 30 | Mangalore | 16 | 2260 | 84 | 2344 |
| 31 | Udupi | 06 | 1340 | 46 | 1386 |
| 32 | Chikamagalur | 19 | 4940 | 93 | 5033 |
| 33 | Shivamogga | 08 | 1960 | 63 | 2023 |
| 34 | Kodagu | 02 | 790 | 23 | 813 |
| Total | 34 | 1143 | 2,00,745 | 10,210 | 2,09,955 |



ಹಿಮಾಂಶು ಶಾಲೆ, ಬೆಂಗಳೂರು ಉತ್ತರ



ಸರಕಾರಿ ಪ್ರೌಢಶಾಲೆ, ಬೆಂಗಳೂರು ದಕ್ಷಿಣ



ಎಸ್‌ಜಿಎಂ ಪಿಯು ಕಾಲೇಜ್, ಚಿಕ್ಕಜಾಜೂರು, ಚಿತ್ರದುರ್ಗ




ಸಿಟಿಜನ್ ಸ್ಕೂಲ್, ಚಿಕ್ಕಬಳ್ಳಾಪುರ



ಸರಕಾರಿ ಪ್ರೌಢಶಾಲೆ, ಭಂಡಾರಕುಮಟ, ಬೀದರ್

# ಬೀದರ್‌ನಲ್ಲಿ ಪ್ರೌಢ ಶಾಲಾ ಮಕ್ಕಳು, ಶಿಕ್ಷಕರಿಗೆ ಸಂಕಲ್ಪ ಬೋಧನೆ ಯಶಸ್ವಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕದಿಂದ ಸೋಮವಾರ ಬೀದರ್ ನಗರದ ಹಲವಾರು ಶಾಲೆಗಳಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸಂಕಲ್ಪ ಬೋಧನೆ ಮಾಡಲಾಯಿತು.

• **ಕನ್ನಡಪ್ರಭ ವಾರ್ತೆ** ಬೀದರ್

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ದೆಹಲಿ ಅಡಿಯಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕದಿಂದ ಸೋಮವಾರ ಬೀದರ್ ನಗರದ ಹಲವಾರು ಶಾಲೆಗಳಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸಂಕಲ್ಪ ಬೋಧನೆ ಮಾಡಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಪರಮೇಶ್ವರ ಬಿರಾದಾರ ಅವರು ಜೀಜಾಮಾತಾ ಶಿಕ್ಷಣ ಕೇಂದ್ರ ಬೀದರ್, ಅರುಣೋದಯ ಶಾಲೆ ಬೀದರ್, ವಿದ್ಯಾಶ್ರೀ ಪ್ರೌಢ ಶಾಲೆ ಬೀದರ್, ವಿದ್ಯಾರತ್ನ ಪ್ರೌಢಶಾಲೆ ಬೀದರ್, ಶ್ರೀಮತಿ ಇಂದಿರಾಬಾಯಿ ಗುರುಪಪ್ಪಾ ಶೇಟಕಾರ ಪ್ರೌಢ ಶಾಲೆ ಬೀದರ್, ಸುಮನಾ ಪ್ರೌಢ ಶಾಲೆ ಬೀದರ್ ಹೀಗೆ ಹಲವಾರು ಶಾಲೆಗಳಲ್ಲಿ, ನಮ್ಮ ಶಾಲೆಯಲ್ಲಿ ನಾವೆಲ್ಲರೂ ಸೇರಿ ಸ್ವಚ್ಛವಾಗಿ, ಆನಂದದಿಂದ, ಹಸಿರಾಗಿ ಮತ್ತು ಪ್ರೇರಣಾದಾಯಿಯಾಗಿ ಇರುತ್ತವೆ ಸೇರಿದಂತೆ ಇನ್ನಿತರ ಸಂಕಲ್ಪ ಬೋಧನೆ ಮಾಡಲಾಯಿತು.

ನಮ್ಮ ಶಾಲೆಯ ಕಟ್ಟಡ - ಪರಿಕರಗಳು ಮತ್ತು ಸಮಯ ಇವೆಲ್ಲವೂ ರಾಷ್ಟ್ರೀಯ ಸಂಪತ್ತು ಎಂದು ಭಾವಿಸಿ ಅದರ ಸಂರಕ್ಷಣೆ ಮಾಡುತ್ತಾ ಮತ್ತು ವಿವೇಕದಿಂದ ಬಳಸುತ್ತೇವೆ.

ನಮ್ಮ ಶಾಲೆಯಲ್ಲಿ ನಾವೆಲ್ಲರೂ ಸೇರಿ ಒಂದು ಒಳ್ಳೆಯ ವಾತಾವರಣ ಅಂದರೆ ಭೇದ ಭಾವ ಇಲ್ಲದೆ ಮತ್ತು ಸಮಾನತೆಯಿಂದ ಕೂಡಿದ ಕಲಿಯುವ ಮತ್ತು ಕಲಿಸುವ ವಾತಾವರಣನಿರ್ಮಾಣಮಾಡುವಲ್ಲಿ ಪಂಕ್ತಿಯಲ್ಲಿ ನಾವೆಲ್ಲರೂ ಇರುತ್ತೇವೆ.

ನಾವುನಡೆಯುವಶಿಕ್ಷಣಕೇವಲಜ್ಞಾನಕ್ಕಾಗಿ ಅಲ್ಲ, ಅದರಿಂದ ಚರಿತ್ರೆ ನಿರ್ಮಾಣ, ಆತ್ಮವಿಕಾಸ ಮತ್ತು ಸಮಾಜ ಸೇವಾ ಮಾಡುವ ಸಾಧನ ಎಂದು ಕಾರ್ಯತತ್ಪರರಾಗಬೇಕು. ನಮ್ಮ ಶಾಲೆ ಇದು ಕೇವಲ ಒಂದು ಸಂಸ್ಥೆ ಎಂದು ತಿಳಿಯದೆ, ಸಂಸ್ಕಾರ, ಸೇವಾ ಮತ್ತು ಸಮರ್ಪಣೆಯ ತೀರ್ಥಕ್ಷೇತ್ರ ಎಂದು ತಿಳಿದು ಗೌರವ ಹೆಚ್ಚಿಸುವ, ಸತತ ಪ್ರಯತ್ನಶೀಲರಿಂದ ಇರುತ್ತೇವೆ ಎಂದು ಬೋಧಿಸಲಾಯಿತು




ಶಾರದಾ ಇಂಗ್ಲೀಷ್ ಶಾಲೆ, ಹಗರಿಬೊಮ್ಮನಹಳ್ಳಿ, ಬಳ್ಳಾರಿ




ಕಿಟೆಲ್ ಪಿಯು ಕಾಲೇಜ್, ಧಾರವಾಡ




ಸರಕಾರಿ ಪ್ರೌಢಶಾಲೆ, ನಾಯ್ಕಲ್, ಯಾದಗಿರಿ



MGVSHS ಮುದ್ದೇಬಿಹಾಳ, ವಿಜಯಪುರ



ಮಾಧವ ವಿದ್ಯಾಲಯ, ಕೆರಗೋಡು, ಮಂಡ್ಯ

**ಪ್ರತಿ ಶಿಕ್ಷಕನೂ ನೈತಿಕ ಶಿಕ್ಷಣ ಶಿಕ್ಷಕನಾಗಿರಬೇಕು.**



ಸರಕಾರಿ ಶಾಲೆ, ಮಾರ್ಕಂಡೇಯ ನಗರ, ಬೆಳಗಾವಿ



ನಳಂದ ಪಿಯು ಕಾಲೇಜ್, ಜಗಳೂರು, ದಾವಣಗೆರೆ



ಕುಲಹಳ್ಳಿ, ಬಾಗಲಕೋಟೆ



ಸರಕಾರಿ ಪ್ರೌಢಶಾಲೆ, ಬಡವನಹಳ್ಳಿ, ತುಮಕೂರು



ಹೇಮಾವತಿ ಪ್ರೌಢಶಾಲೆ, ಅರಕಲಗೂಡು, ಹಾಸನ



ಗೋಗಿ ಸಮೀಪದ ಚಾಮನಾಳ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಮ್ಮ ವಿದ್ಯಾಲಯ ನಮ್ಮ ಸ್ವಾಭಿಮಾನ ಕಾರ್ಯಕ್ರಮದಲ್ಲಿ ಉಪನ್ಯಾಸಕ ಜೆ.ಎಸ್. ದೇಸಾಯಿ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಾಂಶುಪಾಲ ಶಿವಾನಂದ, ಉಪನ್ಯಾಸಕರಾದ ಸಂತೋಷ ಬುಸ್ಸಾ, ಸ್ಮಿತಾ, ನಾಗರಾಜ, ಭಾಗ್ಯಶ್ರೀ ಇದ್ದರು.



ಪಿಪಿಜಿ ಪ್ರೌಢಶಾಲೆ, ಗದಗ

**ಅಜ್ಞಾನ–ಆಲಸ್ಯಗಳಿಂದ ಆಗಾಗ ಜಡಗಟ್ಟುವ ಸಮಾಜವನ್ನು ಜಾಗೃತಗೊಳಿಸಿ, ಅಲ್ಲಿ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಲು ಮಾತಿನ ಜ್ಯೋತಿರ್ಲಿಂಗವೇ ಬೇಕು !**

# ದಿ. ಉದಯರವಿ ಪ್ರಕಾಶ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಕ.ರಾ.ಮಾಧ್ಯಮಿಕ ಶಿಕ್ಷಕ ಸಂಘದ ಪ್ರಾಂತ ಉಪಾಧ್ಯಕ್ಷರಾದ ಶ್ರೀ ಉದಯರವಿಪ್ರಕಾಶ ರವರು ದಿ.8.9.2025 ರಂದು ಅನಾರೋಗ್ಯದ ಕಾರಣದಿಂದ ನಮ್ಮನ್ನಗಲಿದರು. ಶ್ರೀಯುತರ ಅಗಲಿಕೆಯಿಂದ ಶಿಕ್ಷಕ ಸಂಘವು ಒಬ್ಬ ಕ್ರಿಯಾಶೀಲ ಕಾರ್ಯಕರ್ತನನ್ನು ಕಳೆದುಕೊಂಡಂತಾಗಿದೆ, ಹಾಗೂ ಶಿಕ್ಷಕ ಸಂಘಕ್ಕೆ ತುಂಬಲಾರದ ನಷ್ಟವಾಗಿದೆ,

ದಿವಂಗತರು ಮೈಸೂರು ಜಿಲ್ಲೆ, ಹೆಚ್.ಡಿ ಕೋಟೆ ತಾಲೂಕು, ಹೊಮ್ಮರಗಹಳ್ಳಿ ಸರ್ಕಾರಿ.ಪ.ಪೂಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇವರು ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ) ಮಾಧ್ಯಮಿಕ ಶಿಕ್ಷಕ ಸಂಘ, ವೃತ್ತಿ ಶಿಕ್ಷಣ (ಜೆ.ಓ.ಸಿ.) ನೌಕರರ ಸಂಘ, ಮೈಸೂರು ಜಿಲ್ಲಾ ಕಾಮರ್ಸ್ ಉಪನ್ಯಾಸಕರ ಫೋರಂ, ಹೀಗೆ ವಿವಿಧ ಸಂಘಟನೆಗಳಲ್ಲಿ ಜಿಲ್ಲಾ, ವಿಭಾಗ ಮತ್ತು ಪ್ರಾಂತ ಮಟ್ಟದವರೆಗೂ ವಿವಿಧ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸಿದವರು, ಶ್ರೀಯುತರು ಆರಂಭದಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವೃತ್ತಿ ಶಿಕ್ಷಣ ವಿಭಾಗದದಲ್ಲಿ ಉಪನ್ಯಾಸಕರಾಗಿ ದಶಕಗಳ ಕಾಲ ಸೇವೆ ಸೇವೆ ಸಲ್ಲಿಸಿದರು. ಆ ಕಾಲ ಘಟ್ಟದಲ್ಲಿ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಶಿವಾನಂದ ಸಿಂಧನಕೇರಾ ರವರ ಸಹೋದ್ಯೋಗಿಯಾಗಿ ಸಂಪರ್ಕಕ್ಕೆ ಬಂದು ಹೆಚ್ಚಿನ ಒಡನಾಡಿಯಾದರು ಮುಂದುವರೆದು ಇವರೀರ್ವರ ಪ್ರಯತ್ನದಿಂದ ಅದೇ ಕಾಲೇಜಿನ ಪ್ರಾಚಾರ್ಯರಾದ ಶ್ರೀ ನಾಗರಾಜ ರವರನ್ನೂ ಸಹ ಶಿಕ್ಷಕ ಸಂಘದ ಕಾರ್ಯಕರ್ತರನ್ನಾಗಿಸುವಲ್ಲಿ ರವಿ ಯವರು ಪ್ರಮುಖ ಪಾತ್ರ ವಹಿಸಿದರು, ಶಿಕ್ಷಕ ಸಂಘದ ಕಾರ್ಯ ಹೆಚ್ಚಿನ ಬೆಳವಣಿಗೆ ಇಲ್ಲದೇ ಇರುವ ಸಂದರ್ಭದಲ್ಲಿ ಇತರೇ ಕಾರ್ಯಕರ್ತರ ಸಹಕಾರದಿಂದ ವಿಶೇಷವಾಗಿ ಮೈಸೂರು ಜಿಲ್ಲಾ ಶಿಕ್ಷಕ ಸಂಘ ಕಾರ್ಯ ಬೆಳೆಸಲು ಮತ್ತು ಕಾರ್ಯಕರ್ತರನ್ನು ಬೆಳೆಸಲು ಸಹ ತಮ್ಮದೇ ಆದ ಕೊಡುಗೆ ನೀಡಿದವರು.

ಸಂಘದ ಹಿರಿಯರ ಮಾರ್ಗದರ್ಶನದಂತೆ ಕಾರ್ಯನಿರ್ವಹಿಸುತ್ತಾ, ಜಿಲ್ಲೆಯ ಎಲ್ಲಾ ಕಾರ್ಯಕರ್ತರಿಗೆ ಆಪ್ತ ಒಡನಾಡಿಯಾಗಿ, ಒಬ್ಬ ಕ್ರಿಯಾಶೀಲ ಕಾರ್ಯಕರ್ತನಾಗಿ ಗುರುತಿಸಿಕೊಂಡವರು, 2010–13 ಕಾಲಘಟ್ಟದಲ್ಲಿ ವೃತ್ತಿ ಶಿಕ್ಷಣ ಜೆಒಸಿ ನೌಕರರ ಸೇವಾ ಖಾಯಂಮಾತಿ ಹೋರಾಟದ ನೇತೃತ್ವ ವಹಿಸಿದ್ದ ಶಿಕ್ಷಕ ಸಂಘದ ಕಾರ್ಯಕರ್ತರಾರ ಶ್ರೀ ಗಂಗಾಧರಾಚಾರಿಯವರ ಜೊತೆಗೂಡಿ ಮಾಧ್ಯಮಿಕ ಶಿಕ್ಷಕ ಸಂಘದ ಸಹಕಾರದಿಂದ ಜೆಒಸಿ ಶಿಕ್ಷಕರ ಸೇವಾ ಖಾಯಂ ಹೋರಾಟಕ್ಕೆ ಶಕ್ತಿ ತುಂಬಿದವರು, ತಮ್ಮ ಸೇವಾ ವಿಲೀನಗೊಂಡು ಖಾಯಂ ನೌಕರರಾದ ಮೇಲೆ ಶಿಕ್ಷಕ ಸಂಘದ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಒಬ್ಬ ಶಿಕ್ಷಕನಾಗಿ ಇಲಾಖಾ ಮಟ್ಟದ ಅಧಿಕಾರಿಗಳೊಂದಿಗೆ, ಹಾಗೂ ಸಮಾಜದಲ್ಲಿ ಒಳ್ಳೆಯ ಸಂಬಂಧ ಸಂಪರ್ಕ ಹೊಂದಿ ಸದಾ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ನ್ಯಾಯಕ್ಕಾಗಿ ಹೋರಾಟ ಮಾಡುವ ಸ್ವಭಾವದವರಾಗಿದ್ದರು, ಎಂತಹಾ ಸಮಸ್ಯೆ ಎದುರಾದರೂ ಧೃತಿಗೆಡದೇ ಮುನ್ನುಗ್ಗುವ ಮತ್ತು ಆತ್ಮ ಸ್ಥೈರ್ಯವುಳ್ಳ ಕಳೆದುಕೊಳ್ಳದ ವ್ಯಕ್ತಿತ್ವವಾಗಿತ್ತು, ಸಮಸ್ಯೆಗಳು ಎದುರಾದಾಗ ಪರಿಹಾರಕ್ಕಾಗಿ ಒಬ್ಬ ಒಳ್ಳೆಯ ಸಲಹೆಗಾರರೂ ಆಗಿದ್ದರು, ಈ ಎಲ್ಲಾ ಗುಣಗಳುಳ್ಳ ಕಾರ್ಯಕರ್ತ ನಮ್ಮನ್ನು ಆಗಲಿದ್ದು ದುಃಖದ ಸಂಗತಿ,

ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾಗಿದ್ದ ಶ್ರೀಯುತ ಉದಯ ರವಿ ಪ್ರಕಾಶರವರಿಗೆ ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ವರದಿ –ಗಂಗಾಧರಾಚಾರಿ.ಅ ಪ್ರಾಂತ ಉಪಾಧ್ಯಕ್ಷರು.

# ನುಡಿನಮನ



ಕ. ರಾ. ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಪ್ರಾಂತ ಉಪಾಧ್ಯಕ್ಷರಾಗಿದ್ದ ದಿವಂಗತ ಶ್ರೀ ಉದಯರವಿ ಪ್ರಕಾಶರವರಿಗೆ ಮೈಸೂರಿನ ಗೋಪಾಲಸ್ವಾಮಿ ಕಾಲೇಜಿನಲ್ಲಿ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು

ಎಲ್ಲರೂ ಮೌನಾಚರಣೆ, ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು ಆರಂಭದಲ್ಲಿ ಶ್ರೀ ಗೋಮಧುಸೂಧನ ಮಾಜಿ ಶಾಸಕರು ಮಾತನಾಡಿ ಉದಯರವಿಪ್ರಕಾಶ್ ರವರ ಒಡನಾಟ,ನಡೆ, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಸಾಮಾಜಿಕ ಕಳಕಳಿ ಮತ್ತು ಜನ ಸಂಪರ್ಕ ಕುರಿತಂತೆ ಸ್ಮರಿಸಿದರು, ಮುಂದುವರೆದು ಶ್ರೀ ಸ್ವಾಮಿ ಮರುಳಾಪುರ ಎಬಿವಿಪಿ ನಿಕಟಪೂರ್ವ ಪೂರ್ಣಾವದಿ ಕಾರ್ಯಕರ್ತರು ಮಾತನಾಡಿ ರವಿಯವರು ವಿದ್ಯಾರ್ಥಿ ಪರಿಷತ್ ನಲ್ಲಿ ಮಾಡಿದ ಕೆಲಸ ಕಾರ್ಯ ಗಳನ್ನು ಸ್ಮರಿಸಿದರು,

ನಂತರ ಶ್ರೀಗಂಗಾಧರಾಚಾರಿ ಪ್ರಾಂತ ಉಪಾಧ್ಯಕ್ಷರು ಮಾತನಾಡಿ ಸುಮಾರು ಮೂರು ದಶಕಗಳ ರವಿಯವರ ಜೊತೆಗಿನ ವೈಯಕ್ತಿಕ ಬಾಂಧವ್ಯ, ಸ್ವಂತಕ್ಕಾಗಿ ಏನನ್ನೂ ಅಪೇಕ್ಷಿಸದೇ ಇತರರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ, ಸಮಾಜದಲ್ಲಿ ವ್ಯಕ್ತಿ ಶಕ್ತಿಯಾಗಿ ಬೆಳೆದು ರೀತಿ ಹಾಗೂ ವೃತ್ತಿ ಶಿಕ್ಷಣ ನೌಕರರ ಸೇವಾ ಖಾಯಂ ಗಾಗಿ ನಡೆಸಿದ ಸುದೀರ್ಘ ಹೋರಾಟದಲ್ಲಿ ರವಿಯವರ ಸ್ಪಂದನೆ ಕುರಿತು ಜ್ಞಾಪಿಸಿಕೊಳ್ಳುತ್ತಾ ಮರೆಯಲಾಗದ ಮಿತ್ರನನ್ನು ಕಳೆದುಕೊಂಡಿದ್ದರ ಬಗ್ಗೆ ಬೇಸರ ವ್ಯಕ್ತಪಡಿಸಿದರು,

ಶ್ರೀ ವೃಷಬೇಂದ್ರಸ್ವಾಮಿ ಪ್ರಾಂತ ಸಂಘಟನಾ ಕಾರ್ಯದರ್ಶಿ, ಶ್ರೀ ಅರುಣ್ ಕುಮಾರ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ, ಜಿಲ್ಲಾ ಅಧ್ಯಕ್ಷರಾದ ಶ್ರೀ ಕೆಂಪಣ್ಣ, ಗೋಪಾಲಸ್ವಾಮಿ ಕಾಲೇಜಿನ ಪ್ರಾಂಶುಪಾಲ ಶ್ರೀ ಮಂಜುನಾಥ ರವರುಗಳು ಶಿಕ್ಷಕ ಸಂಘದ ಕಾರ್ಯವೈಖರಿ, ನಾಯಕತ್ವ ಗುಣಗಳು ಹಾಗೂ ಅವರ ಸೇವಾ ಮನೋಭಾವ ಕುರಿತಂತೆ ಸ್ಮರಿಸಿ ಉದಯ ರವಿಪ್ರಕಾಶ್ ರವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕುಟುಂಬದವರು, ಆಪ್ತ ಬಂಧು ಮಿತ್ರರು, ಸಂಘದ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-10-2025 Date of Posting 20th or 21st of every month Posted at Periodical Rate

# ಸಹಲ್ ಕಾರ್ಯಕ್ರಮ– ಬೆಂಗಳೂರು ಉತ್ತರ ಜಿಲ್ಲೆ



ದಿನಾಂಕ: 31–8–2025ರ ಭಾನುವಾರ ಬೆಳಿಗ್ಗೆ 6–15ಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಯಾದವಸ್ಮೃತಿಯಿಂದ ಕಾರ್ಯಾಲಯ ಪ್ರಮುಖರಾದ ಶ್ರೀ ಜೆ. ಎಂ ಜೋಶಿಯವರ ಮಾರ್ಗದರ್ಶನದಲ್ಲಿ ಬೆಂಗಳೂರು ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್, ಉತ್ತರ ಜಿಲ್ಲೆಯ ಗೌರವಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿಯವರು , ಸಹಲ್‌ನ ಸಂಚಾಲಕರಾದ ಶ್ರೀ ಎಂ.ವಿ ಗಂಗಾಧರ್‌ರವರ ನೇತೃತ್ವದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ಮಲೆಮಹದೇಶ್ವರ ಬೆಟ್ಟ ಹಾಗೂ ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನಗಳಿಗೆ ಒಂದು ದಿನದ ಸಹಲ್ ಕಾರ್ಯಕ್ರಮವನ್ನು ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಹರಿದಾಸ್‌ರವರು ವಾಹನಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಚಾಲನೆ ನೀಡಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ವಲಯ 3ರ ಅಧ್ಯಕ್ಷರಾದ ಶ್ರೀ ಎಂ.ವಿ ಗಂಗಾಧರ್‌ರವರು ಸಹಲ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಜೆ.ಎಂ ಜೋಶಿರವರು ಸಂಘದ ಕಾರ್ಯಚಟುವಟಿಕೆಗಳು ಹಾಗೂ ಪ್ರವಾಸದ ವಿವರಗಳನ್ನು ನೀಡಿದರು. ಸಹಲ್‌ನಲ್ಲಿ ಭಾಗವಹಿಸಿದ್ದ ಜಿಲ್ಲೆಯ ಉಪಾಧ್ಯಕ್ಷರಾದ ಶ್ರೀ ಎ.ಸಿ ಪ್ರದೀಪರವರು ಎಲ್ಲರೂ ಒಟ್ಟಿಗೆ ಸೇರಿ ಕಾರ್ಯಕ್ರಮಗಳನ್ನು ಮಾಡೋಣ ಎಂದು ತಿಳಿಸಿದರು. ಶ್ರೀ ನಾರಾಯಣ ಭಟ್ಟರವರು ಸೆಪ್ಟೆಂಬರ್ 1 ರಂದು ಹಮ್ಮಿಕೊಂಡಿರುವ "ನಮ್ಮ ಶಾಲೆ ನಮ್ಮ ಸ್ವಾಭಿಮಾನ" ಕಾರ್ಯಕ್ರಮದ ವಿವರಗಳನ್ನು ನೀಡಿದರು. ಸಹಲ್‌ನಲ್ಲಿ ಭಾಗವಹಿಸಿದ ಎಲ್ಲಾ ಪದಾಧಿಕಾರಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮಲೆ ಮಹಾದೇಶ್ವರ ಬೆಟ್ಟಕ್ಕೆ ಸರಿಯಾಗಿ 11–30ಕ್ಕೆ ತಲುಪಿ ಎಲ್ಲರೂ ವಿಶೇಷ ದೇವರ ದರ್ಶನವನ್ನು ಎಲ್ಲಾ ಪದಾಧಿಕಾರಿಗಳು ಪಡೆದು, ಪುನೀತರಾದೆವು ಹಾಗೂ ಅಲ್ಲಿ ಪ್ರಸಾದವನ್ನು ಸೇವಿಸಲಾಯಿತು. ನಂತರ ನಂಜನಗೂಡಗೆ ಪ್ರಯಾಣ ಬೆಳೆಸಿ ಸಂಜೆ ಶ್ರೀಕಂಠೇಶ್ವರನ ವಿಶೇಷ ದರ್ಶನ ಪಡೆಯಲಾಯಿತು.

ಮೈಸೂರಿನ ಮುಖಾಂತರ ಬೆಂಗಳೂರಿಗೆ ಹಿಂದಿರುಗುವಾಗ ಎಲ್ಲಾ ಪದಾಧಿಕಾರಿಗಳು ಮನರಂಜನೆ ಕಾರ್ಯಕ್ರಮಗಳನ್ನು ನೀಡಿದರು. ನಂತರದಲ್ಲಿ ವಾಹನದಲ್ಲಿ ಸಹಲ್ ಕಾರ್ಯಕ್ರಮದ ಅವಲೋಕನ ಸಭೆ ನಡೆಯಿತು. ಎಲ್ಲಾ ಪದಾಧಿಕಾರಿಗಳು ತಮ್ಮ ಪ್ರವಾಸ ಅನುಭವವನ್ನು ಹಂಚಿಕೊಂಡು ಮುಂದಿನ ದಿನಗಳಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು ಇನ್ನೂ ಹೆಚ್ಚು ವಿಸ್ತರಿಸಬೇಕೆಂದು ಅಭಿಪ್ರಾಯ ಪಟ್ಟರು. ಉತ್ತರ ಜಿಲ್ಲೆಯ ಪ್ರಧಾನ ಕಾಯದರ್ಶಿಗಳಾದ ಶ್ರೀ ಕಿರಣ ಕುಮಾರ್‌ರವರು ಎಲ್ಲರಿಗೂ ವಂದಿಸಿದರು. ಒಟ್ಟಾರೆ ಈ ಕಾರ್ಯಕ್ರಮವು ತುಂಬಾ ಲವಲವಿಕೆ ಮತ್ತು ಚೈತನ್ಯಯುತವಾಗಿ ಸಂಪನ್ನಗೊಂಡಿತು.

– ಗಂಗಾಧರ ಎಂವಿ. ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರವಲಯ–3

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com